
ಹಿತ್ತಲ ಗಿಡ

ಚಾತುರ್ಮಾಸಿಕ
ಪೈರು 9, ಕೊಯಿಲು 2, ಮೇ - ಆಗಸ್ಟ್, 2003

ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ತಳಮಟ್ಟದ ಅನುಶೋಧಕರ 'ಬೌದ್ಧಿಕ ಸನಧಿನ ಹಕ್ಕು'ಗಳ ಬಗ್ಗೆ ಚಿಂತಿಸಬಾರದೇಕೆ?



ಇರುವೆ ಆನೆಯನ್ನು ನಿಯಂತ್ರಿಸಬಲ್ಲದೆ! ಖಂಡಿತ ....

ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಏಶಿಯಾ ಖಂಡದ ಆಹಾರ ಸಾಮ್ಯದ ಮೂಲಾಧಾರವಾದ ಬತ್ತದ ಮೇಲಿನ ಬೌದ್ಧಿಕ ಕಸರತ್ತುಗಳು

ವೃತ್ತಿ, ಪ್ರವೃತ್ತಿ, ಆದರ್ಶ, ಕಾಳಜಿಗಳೆಲ್ಲಾ ಒಗ್ಗೂಡುವ ಅವಕಾಶ ಸಿಗುವುದು ಒಂದು ರೀತಿಯಲ್ಲಿ ಸುದೈವವೇ ಸರಿ. ಜೀವ ವೈವಿಧ್ಯದ ಮೇಲೆ ಕೆಲಸ ಮಾಡುವ ಯಾರಿಗಾದರೂ ಈ ರೀತಿ ಅವಕಾಶ ಸಿಕ್ಕಲ್ಲಿ ಆ ಕೆಲಸ ಅತ್ಯಂತ ರಚನಾತ್ಮಕವೂ ಹಾಗೇ ಪ್ರಗತಿದಾಯಕವೂ ಆಗುವಂಥದ್ದು. ಈ ನಿಟ್ಟಿನಲ್ಲಿ ಬತ್ತದ ಮೇಲೆ ಕೆಲಸ ಮಾಡುವ ನನ್ನ ಸ್ವಯಂ ಅನುಭವವನ್ನು ಹಂಚಿಕೊಳ್ಳಲು ಸಂತಸವಾಗುತ್ತದೆ.

'ರಾಷ್ಟ್ರೀಯ ಜೀವವೈವಿಧ್ಯ ಕಾರ್ಯನೀತಿ ಮತ್ತು ಯೋಜನೆ' (National Biodiversity Strategy and Action Plan)

ಕೇಂದ್ರ ಸರ್ಕಾರದ ಈ ಮಹತ್ ಯೋಜನೆಯ ಒಂದಂಶವಾಗಿ ಕೃಷಿ, ಜಾನುವಾರು, ಸಾಕು ಪ್ರಾಣಿಗಳು ಮತ್ತು ಮತ್ಸ್ಯ ಇವೇ ಮೊದಲಾದ 'ಸಾಕಾಣಿಕೆಗೊಳಪಟ್ಟಿರುವ ಜೀವವಿವಿಧತೆ'(Domesticated Bio-diversity)ಯ ಬಗ್ಗೆ ವಿವರವಾದ ಕಾರ್ಯ ನೀತಿ ಮತ್ತು ಯೋಜನೆ ನಿರೂಪಿಸುವ ಜವಾಬ್ದಾರಿ ನನ್ನ ಮೇಲೆ ಬಿದ್ದಿತ್ತು. ಇದನ್ನು ಯಶಸ್ವಿಯಾಗಿ ಪೂರೈಸಿ ಈ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿ ಅನುಮೋದನೆ ಕೂಡ ಪಡೆಯಲಾಗಿರುತ್ತದೆ. ಭಾರತದಲ್ಲಿ ಸಾಕಾಣಿಕೆಗೊಳಪಟ್ಟಿರುವ ಜೀವ ವಿವಿಧತೆಯ ಸ್ಥಿತಿಗತಿಗಳನ್ನು ಅಂಕಿ ಅಂಶ ಸಮೇತ ಚರ್ಚಿಸಿ ಇದಕ್ಕೂ ಮತ್ತು ದೇಶೀಯ ಸಂಸ್ಕೃತಿ, ಗ್ರಾಮೀಣ ಮಹಿಳೆ ಹಾಗೇ ಆಹಾರ ಭದ್ರತೆ ಮೊದಲಾದ ವಿಚಾರಗಳಿಗೂ ಇರುವ ಗಾಢ ನಂಟನ್ನು ಗಟ್ಟಿಗೊಳಿಸುವ ವಿಚಾರದ ಬಗ್ಗೆ ಈ ವರದಿಯಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ. ಭಾರತದಲ್ಲಿ ಲಭ್ಯವಿರುವ ಸಾಕಾಣಿಕೆಗೊಳಪಟ್ಟಿರುವ ಜೀವವಿವಿಧತೆಯನ್ನು ಸಂರಕ್ಷಿಸಿ ಅದನ್ನು ಸುಸ್ಥಿರ ಮತ್ತು ಸಮಾನ ರೀತಿಯಲ್ಲಿ ಬಳಸುವ ಬಗೆಯನ್ನು 13 ಕಾರ್ಯ ನೀತಿ (Strategies) ಮತ್ತು 61 ಕಾರ್ಯ ಯೋಜನೆ (Action Plan)ಗಳಲ್ಲಿ ವಿವರಿಸಲಾಗಿದೆ. ಬತ್ತದ ಬಗ್ಗೆ ವಿಶೇಷ ಒತ್ತನ್ನು ಈ ವರದಿಯಲ್ಲಿ ನೀಡಿದ್ದು, ಕೆಲ ಮುಖ್ಯ ಕಾರ್ಯಯೋಜನೆಗಳು ಈ ಕೆಳಕಂಡಂತಿರುತ್ತವೆ.

★ ಮಹಿಳೆಯರ ಮೂಲಕ ನಾಟೀ ತಳಿಗಳ 'ಬೀಜ ಸಂಘ', 'ಸಮುದಾಯ ಧಾನ್ಯ ಮತ್ತು ಜೈವಿಕ ನಿಧಿ' ಸ್ಥಾಪಿಸುವುದು.

★ ಗಂಡಾಂತರದ ಅಂಚಿನಲ್ಲಿರುವ ಪ್ರತೀ ನಾಟೀ ತಳಿಗಳನ್ನು ನಿರ್ದಿಷ್ಟ ಪ್ರದೇಶದಲ್ಲಿ ವಿಶೇಷ ಪ್ರೋತ್ಸಾಹದ ಮೂಲಕ ರೈತರ ಹೊಲದಲ್ಲೇ ಬೆಳಸುವುದು. ಅಂತಹಾ ರೈತರಿಗೆ ಕಡಿಮೆ ದರದಲ್ಲಿ ಸಾಲ ರಿಯಾಯ್ತಿ ಹಾಗೂ ಬೆಳೆ ವಿಮೆ ನೀಡುವುದು.

★ ವಿವಿಧ ದೇಶೀಯ ತಳಿಗಳ ವೈಶಿಷ್ಟತೆಯನ್ನು ತಿಳಿಸುವ "ಕೃಷಿ ಕೈಪಿಡಿ"ಯನ್ನು ಸ್ಥಳೀಯ ಭಾಷೆಗಳಲ್ಲಿ ಹೊರತರುವುದು. ಅವುಗಳನ್ನು ಸ್ಥಳೀಯವಾಗಿ "ಬೀಜ ಮೇಳ" ಮತ್ತು "ಬೀಜ ಹಬ್ಬ"ಗಳನ್ನು ಏರ್ಪಡಿಸುವ ಮೂಲಕ ವಿನಿಮಯ ಮಾಡುವುದಕ್ಕೆ ಪ್ರೋತ್ಸಾಹಿಸುವುದು.

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), New Delhi

★ ನಾಟೀ ತಳಿಗಳ ಕೃಷಿಗೆ ಪೂರಕವಾದ 'ಪಾರಂಪರಿಕ ಜ್ಞಾನ ಮತ್ತು ದೇಶೀಯ ತಂತ್ರಜ್ಞಾನ ಕೈಪಿಡಿ'ಯನ್ನು ವಿವಿಧ ಭಾಷೆಗಳಲ್ಲಿ ಹೊರತರುವುದು.

★ ನಾಟೀ ತಳಿ ಧಾನ್ಯವನ್ನು ಸರ್ಕಾರವೇ ಕೊಂಡು ಪಡಿತರ ವ್ಯವಸ್ಥೆಯ ಮೂಲಕ ರಿಯಾಯ್ತಿ ದರದಲ್ಲಿ ವಿತರಿಸುವುದು.

★ ಸಾವಯವ ಕೃಷಿ ಹಾಗೂ ನಾಟೀ ತಳಿಗಳನ್ನು ಸಂಗ್ರಹಿಸಿ, ಬಳಸುತ್ತಿರುವ ರೈತರಿಗೆ ವಿಶೇಷ ಪುರಸ್ಕಾರ ನೀಡುವುದು. ಅವರ ಹೊಲ-ಗದ್ದೆ-ತೋಟಗಳನ್ನು "ಜೀವ ವೈವಿಧ್ಯ ಪರಂಪರೆ" ಕ್ಷೇತ್ರವೆಂದು ಘೋಷಿಸಿ, ಅಲ್ಲಿಗೆ ರೈತರು "ವಿಸ್ತರಣಾ ಪ್ರವಾಸ" ಕೈಗೊಳ್ಳುವಂತೆ ಮಾಡುವುದು.

★ ನಾಟೀ ತಳಿ ಧಾನ್ಯಗಳಿಂದ ತಯಾರಿಸಿದ ಆಹಾರ ತಿಂಡಿಗಳಲ್ಲಿನ ರುಚಿತನ, ಆರೋಗ್ಯ, ಪೌಷ್ಟಿಕತೆ, ಇತ್ಯಾದಿ ಅಂಶಗಳನ್ನು ಪ್ರಚಾರ ಮಾಡಿ ಈ ರೀತಿಯ ತಿಂಡಿತಿನಿಸುಗಳು ಗ್ರಾಹಕರಿಗೆ ಸುಲಭವಾಗಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳುವುದು.

ಈ ವರದಿಯ ಮೇಲೆ ವಿಸ್ತೃತ ಚರ್ಚೆಯಾಗಿ ಅದು ಸಂಬಂಧಿಸಿದ ವ್ಯಕ್ತಿ, ಸಂಸ್ಥೆ ಮತ್ತು ಸಮೂಹಗಳ ಕೈ ಸೇರಿ ಅನುಷ್ಠಾನಗೊಳ್ಳುವಂತಾಗಲು ಇದನ್ನು ಮುದ್ರಿಸಿ ಬಿಡುಗಡೆ ಮಾಡುವ ಕಾರ್ಯ ಸದ್ಯದಲ್ಲೇ ನೆರವೇರಲಿದೆ. "ಕಲ್ಪವೃಕ್ಷ"ದ ಆಶಿಷ್ ಕೊಥಾರಿ, 'ಡೆಕನ್ ಡೆವಲಪ್‌ಮೆಂಟ್ ಸಂಘ'ದ ಸತೀಶ್, 'ಗ್ರೀನ್ ಫೌಂಡೇಶನ್'ನ ವನಜಾ ರಾಂಪ್ರಸಾದ್ ಮುಂತಾದವರ ಸಲಹೆ ಸಹಕಾರದಿಂದ ರೈತರು, ವಿಜ್ಞಾನಿಗಳು, ವಿವಿಧ ಸಂಘ ಸಂಸ್ಥೆಗಳೊಡನೆ ಕೂಡಿ ಈ ವರದಿ ತಯಾರಿಸುವ ಮೂಲಕ, 'ಸಾಕಾಣಿಕೆಗೊಳಪಟ್ಟಿರುವ ಜೀವವಿವಿಧತೆ'ಯ ಸಂರಕ್ಷಣೆಯ ಮಹತ್ ಕಾರ್ಯಕ್ಕೆ ಕಿಂಚಿತ್ ಕೊಡುಗೆ ನೀಡುವಂತಾಗಿರುವುದು ಅತ್ಯಂತ ತೃಪ್ತಿಯ ವಿಚಾರವಾಗಿದೆ.

"ಜೀವ ವೈವಿಧ್ಯ ಸಂರಕ್ಷಣೆಯ ಆರ್ಥಿಕ ಮಜಲುಗಳು" (Economics of Bio-diversity Conservation)

ರಾಷ್ಟ್ರೀಯ ಜೀವ ವೈವಿಧ್ಯ ಯೋಜನೆ ತಯಾರಿಕೆಯ ಹಿನ್ನೆಲೆಯಲ್ಲೇ, ಜರ್ಮನಿಯ ಬಾನ್ ವಿಶ್ವವಿದ್ಯಾನಿಲಯದಲ್ಲಿ ಈ ಮೇಲಿನ ವಿಚಾರದ ಮೇಲೆ ಒಂದು ವರ್ಷ ಕಾಲದ ಸಂಶೋಧನೆ ಮತ್ತು ಉನ್ನತ ವ್ಯಾಸಂಗ (Post Doctoral)ಕ್ಕೆ ಅವಕಾಶ ಕೂಡಿ ಬಂತು. ಡಾ. ಡೆಟ್ಲೆಫ್ ವಿರ್ಜೋವ್ ಈ ಸಂಶೋಧನೆಯ ಮೇಲ್ವಿಚಾರಕ. ಅತ್ಯಂತ ಸಹೃದಯಿಯಾದ ಈತ ಭಾರತದ 'ಕೃಷಿ ಜೀವ ವಿವಿಧತೆ' (agro biodiversity)ಯನ್ನು ವಿವರವಾಗಿ ಅಧ್ಯಯನ ಮಾಡಿದಾತ ಮತ್ತು ನಮ್ಮ ಪ್ರೊ. ಅನಿಲ್ ಗುಪ್ತಾರ ಕಟ್ಟಾ ಅಭಿಮಾನಿ. ಹಾಗಾಗಿ ನನ್ನ ಸಂಶೋಧನೆಯ ವಿಚಾರ ಇಂದು ಭಾರತದ ಬತ್ತದ ತಳಿ ವೈವಿಧ್ಯದ ಮೇಲೇ ತಿರುಗುವಂತಾಗಿದೆ. ಅದೂ ಜರ್ಮನಿಯ ಬಾನ್ ವಿಶ್ವವಿದ್ಯಾನಿಲಯದ ಓರ್ವ ಸಂಶೋಧನಾರ್ಥಿಯಾಗಿ! ಈ ನಿಟ್ಟಿನಲ್ಲಿ, ಭಾರತದಲ್ಲಿ ಇಂದು ಲಭ್ಯವಿರುವ ನಾಟೀ ಬತ್ತದ ತಳಿಗಳ ಸ್ಥಿತಿಗತಿ ಮತ್ತು ಅವುಗಳನ್ನು ಸಂರಕ್ಷಿಸಲು ಅಗತ್ಯವಿರುವ 'ಪ್ರೋತ್ಸಾಹ' ಕ್ರಮಗಳು, ಹಾಗೇ ಕಾಯಿದೆ ಕಾನೂನುಗಳ ಬಗ್ಗೆ ಒಂದು ವಿವರವಾದ ಪ್ರಬಂಧ ತಯಾರಿಸಿ ಅದನ್ನು ಫ್ರಾನ್ಸ್ ದೇಶದ 'ಮೆಡಿಟರೇನಿಯನ್'ನ ಮಾಂಟಪಿಲರ್ (ಮಾಪಿಲೀರ್)' ನಗರದಲ್ಲಿ ಕಳೆದ ಮೇ ಅಂತ್ಯದಲ್ಲಿ ಜರುಗಿದ ಒಂದು ಅಂತರ ರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ ಮಂಡಿಸಲಾಗಿರುತ್ತದೆ. ಬತ್ತದ ಜೀವ ವಿವಿಧತೆ ಸಂರಕ್ಷಣೆ ಮಾಡಿ ಅಭಿವೃದ್ಧಿ ಮತ್ತು ಆಹಾರಭದ್ರತೆ ಗುರಿಗಳನ್ನು ಈಡೇರಿಸಿಕೊಳ್ಳಲು ಭಾರತದಂತಹ ರಾಷ್ಟ್ರಕ್ಕೆ ಇರುವ ಹಲವು ಸಾಧ್ಯತೆಗಳನ್ನು ಈ ಪ್ರಬಂಧದಲ್ಲಿ ಸೂಚಿಸಲಾಗಿರುತ್ತದೆ. ಅವುಗಳಲ್ಲಿ ಮುಖ್ಯವಾದ ಮೂರನ್ನು ಕೆಳಗೆ ಕೊಡಲಾಗಿದೆ.

ಸಾಧ್ಯತೆ ೧: ವಿಸ್ತೃತ ಸ್ಥಳೀಯ (*in situ*) ಸಂರಕ್ಷಣೆ

ನೀರಾವರಿ ಮತ್ತು ಕೃಷಿ ಅಭಿವೃದ್ಧಿ ಕುಂಠಿತವಾಗಿರುವ ಆದರೆ ಬತ್ತದ ತಳಿ ವೈವಿಧ್ಯ ಅಗಾಧವಾಗಿರುವ ಪಶ್ಚಿಮ ಬಂಗಾಳ, ಒರಿಸ್ಸಾ, ಈಶಾನ್ಯ ಭಾರತದ ಪ್ರದೇಶಗಳಲ್ಲಿ ಈ ಕ್ರಮ ಕೈಗೊಳ್ಳಬಹುದು. ಈ ರೀತಿ ನಾಟೀ ಬತ್ತದ ತಳಿ ಕೃಷಿ ಮಾಡಿದ ರೈತರಿಗೆ 'ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯನೀತಿ ಮತ್ತು ಯೋಜನೆ'ಯಲ್ಲಿ ಸೂಚಿಸಿರುವಂತೆ ಪ್ರೋತ್ಸಾಹ ಮತ್ತು ಸಹಾಯ ನೀಡುವುದು. ನಾಟೀ ತಳಿಗಳ ಜೊತೆಗೆ ನಮ್ಮ ಲಿಂಗಮಾದಯ್ಯನವರ 'ಮೈಸೂರು ಮಲ್ಲಿಗೆ' ಬತ್ತದಂತೆ ಅಲ್ಲಲ್ಲಿ ರೈತರೇ ಅಭಿವೃದ್ಧಿಪಡಿಸಿರುವ ತಳಿಗಳ (farmers' varieties) ಕೃಷಿಯನ್ನು ಪ್ರೋತ್ಸಾಹಿಸುವುದು. ಈ ತಳಿ ಸಂರಕ್ಷಕರಿಗೆ ನಮ್ಮ ಇತ್ತೀಚಿಗಿನ "ಸಸ್ಯ ತಳಿ ಸಂರಕ್ಷಣೆ ಮತ್ತು ರೈತ ಹಕ್ಕಿನ ಮಸೂದೆ" (Plant Variety Protection and Farmers' Rights Act) ಮೂಲಕ ರಕ್ಷಣೆ ಒದಗಿಸುವುದು.

ಸಾಧ್ಯತೆ ೨: ಮಿತವಾದ ಸ್ಥಳೀಯ ಸಂರಕ್ಷಣೆ ಮತ್ತು ರೈತ ತಳಿ ಅಥವಾ ಆಯ್ದು ಸುಧಾರಿಸಿದ ತಳಿಗಳ ಪ್ರೋತ್ಸಾಹ

ಈ ಸಾಧ್ಯತೆ ಬತ್ತದ ತಳಿ ವೈವಿಧ್ಯ ಅಧಿಕವಾಗಿದ್ದು ನೀರಾವರಿ ಅಭಿವೃದ್ಧಿ ಕೂಡ ಗಣನೀಯವಾಗಿರುವ ತಮಿಳುನಾಡು, ಕರ್ನಾಟಕದಂತಹ ರಾಜ್ಯಗಳಿಗೆ ಸೂಕ್ತವಾಗಿರುತ್ತದೆ. ಆಯಾ ಪ್ರದೇಶದಲ್ಲಿನ ನಾಟೀ ತಳಿಗಳನ್ನು ಸೂಕ್ತ ರೀತಿಯಲ್ಲಿ ಸಂರಕ್ಷಿಸಲು ಆಯ್ದ ಕೆಲವು ರೈತರ ಹೊಲಗಳಲ್ಲಿ ಮಿತವಾಗಿ ಬೆಳೆಯುವಂತೆ ಪ್ರೋತ್ಸಾಹಿಸುವುದು. ಈ ತಳಿಗಳನ್ನು ಬೆಳೆಯುವ ರೈತರು ಸುಧಾರಿಸಿದ ತಳಿ ಅಥವಾ ಬೇರೆ ಬೆಳೆಗಳನ್ನು ಬೆಳೆಯುವುದಕ್ಕೆ ಹೋಲಿಸಿದಲ್ಲಿ ಇಳುವರಿ ಅಥವಾ ಆದಾಯದ ಕಡಿತ ಅನುಭವಿಸಬೇಕಾಗಬಹುದು. ಆ ಕಡಿತವನ್ನು ಸರ್ಕಾರ ಅಥವಾ ತಳಿಸಂರಕ್ಷಣೆ ಜವಾಬ್ದಾರಿ ಹೊತ್ತಿರುವ ಅಂತರರಾಷ್ಟ್ರೀಯ ಸಂಸ್ಥೆಗಳು ಕೂಡಿಸಿ ಕೊಡಬೇಕಾಗುತ್ತದೆ. ಇದಕ್ಕಾಗಿ ಬತ್ತದ ತಳಿ ಸಂರಕ್ಷಣಾ ನಿಧಿಯೊಂದನ್ನು ಸ್ಥಾಪಿಸಬೇಕಾಗುತ್ತದೆ. ಈ ಕ್ರಮದಿಂದ ಸರ್ಕಾರದ ಮೇಲೆ ಹೊರೆ ಅಧಿಕವಾಗುವುದನ್ನು ತಪ್ಪಿಸಲು, ನಾಟೀ ಬತ್ತದ ತಳಿಗಳನ್ನು ಮಿತವಾಗಿ ಒಂದು ನಿರ್ದಿಷ್ಟ ವಿಸ್ತೀರ್ಣದಲ್ಲಿ, ಉದಾಹರಣೆಗೆ ಒಂದು ತಳಿ ಬತ್ತವನ್ನು 5 ಹೆಕ್ಟೇರ್ ಪ್ರದೇಶದಲ್ಲಿ ನಿರಂತರವಾಗಿ ಬೆಳೆಯುವಂತೆ ಮಾಡಿ, ಉಳಿದೆಡೆ, ನೀರಾವರಿ ಲಭ್ಯತೆಗೆ ಅನುಗುಣವಾಗಿ, ರೈತ ತಳಿ ಅಥವಾ ಆಯ್ದು ಸುಧಾರಿಸಿದ ತಳಿಗಳ ಕೃಷಿಗೆ ಅವಕಾಶ ಮಾಡಿ ಕೊಡಬಹುದಾಗಿರುತ್ತದೆ.

ಈ ಮೇಲಿನ ಎರಡೂ ಸಾಧ್ಯತೆಗಳು ಸಾಕಾರಗೊಂಡಿದ್ದೇ ಆದಲ್ಲಿ, ಪ್ರತಿ ವರ್ಷವೂ ಅಪಾರ ಪ್ರಮಾಣದಲ್ಲಿ ನಾಟಿ ಬತ್ತದ ಧಾನ್ಯ ಕೊಯಿಲಿಗೆ ಸಿದ್ಧವಾಗಿ ನಿಲ್ಲುವಂತಾಗುತ್ತದೆ. ಇದಕ್ಕೆ ಬೇಡಿಕೆ ತಂದು ಉಪಯೋಗವಾಗುವಂತೆ ಮಾಡುವುದು ಒಂದು ದೊಡ್ಡ ಸವಾಲಾಗುವುದು ಮಾತ್ರವಲ್ಲ ಆದರಲ್ಲಿ ಯಶಸ್ಸು ಸಾಧಿಸಿದ್ದೇ ಆದಲ್ಲಿ ಅದೊಂದು ನಾಟೀ ಬತ್ತದ ತಳಿ ಸಂರಕ್ಷಣೆಗೆ ಅತ್ಯಂತ

ಯೋಗ್ಯವೂ ದೀರ್ಘಕಾಲೀನವಾಗಿ ಸುಸ್ಥಿರವೂ ಆದಂತಹ ದಾರಿಯೊಂದನ್ನೂ ಕಂಡುಕೊಂಡಂತಾಗುತ್ತದೆ. ಈ ನಿಟ್ಟಿನಲ್ಲಿ 'ರಾಷ್ಟ್ರೀಯ ಜೀವ ವೈವಿಧ್ಯ ಕಾರ್ಯನೀತಿ ಮತ್ತು ಯೋಜನೆ'ಯಡಿಯಲ್ಲಿ ಸೂಚಿಸಿರುವ ಕ್ರಮಗಳು ಜಾರಿಯಾಗುವಂತೆ ಮಾಡುವಲ್ಲಿ ಸರ್ಕಾರ, ಸಂಘ ಸಂಸ್ಥೆ ಮತ್ತು ಸಮುದಾಯಗಳು ಪ್ರಯತ್ನಿಸಬೇಕಾಗುತ್ತದೆ.

ಸಾಧ್ಯತೆ ೩: ಸುಧಾರಿಸಿದ ಮತ್ತು ರೈತ ತಳಿಗಳ ಮಿಶ್ರಣ:

ಇನ್ನು ನೀರಾವರಿ ಸೌಲಭ್ಯ ಮತ್ತು ಅಭಿವೃದ್ಧಿ ಗರಿಷ್ಠ ಪ್ರಮಾಣ ತಲುಪಿರುವ ಹಸಿರುಕ್ರಾಂತಿ ಪ್ರದೇಶಗಳಾದ ಪಂಜಾಬ್, ಹರಿಯಾಣ ಮುಂತಾದ ಪ್ರದೇಶಗಳಲ್ಲಿ ಪರಿಸರ ವಿನಾಶಕ್ಕೆ ಎಡೆಗೊಡದಂತಹ ರೀತಿಯಲ್ಲಿ ಆಯ್ದ ಸುಧಾರಿಸಿದ ತಳಿಗಳನ್ನಾಗಲೀ, ಮಣ್ಣು ಮತ್ತು ನೀರು ಸಂರಕ್ಷಣೆ ವಿಚಾರದಲ್ಲಿ ಸಹಕಾರಿಯಾಗುವ "ಕ್ಷಾರ ನಿರೋಧಕತೆ" (saline resistance) ಹೊಂದಿರುವಂತಹ ನಾಟೀ ಬತ್ತದ ತಳಿಗಳನ್ನಾಗಲೀ ಪ್ರೋತ್ಸಾಹಿಸಬಹುದಾಗಿದೆ. ಇದ್ಯಾವುದೇ ಕ್ರಮಗಳಿಂದಲೂ ಸಂರಕ್ಷಣೆ ಅಸಾಧ್ಯವಾದ ಅಪಾಯದ ಅಂಚಿನಲ್ಲಿರುವ ವಿಶಿಷ್ಟ ಬತ್ತದ ತಳಿಗಳನ್ನು ಸರ್ಕಾರಿ ಸ್ವಾಮ್ಯದ ಜೀನ್ ಬ್ಯಾಂಕ್‌ಗಳಲ್ಲಿ ಸಂರಕ್ಷಿಸಬೇಕಾಗಿದೆ.

ಈ ಎಲ್ಲಾ ಸಾಧ್ಯತೆಗಳನ್ನು ಪರಿಸರ ಅರ್ಥಶಾಸ್ತ್ರದ ಚೌಕಟ್ಟಿನಲ್ಲಿ ವಿಮರ್ಶಿಸಿ ಮಂಡಿಸಲಾದ ಪ್ರಬಂಧಕ್ಕೆ ಮಾಂಟ್‌ಪಿಲ್ಲರ್‌ನ ವಿಚಾರಗೋಷ್ಠಿಯಲ್ಲಿ ವಿಶೇಷ ಮನ್ನಣೆ ದೊರೆತಿರುತ್ತದೆ. **ಈ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ತಳಮಟ್ಟದಲ್ಲಿ ಪರೀಕ್ಷಿಸಿ ನೋಡಬೇಕಾಗಿದೆ. ಈ ನಿಟ್ಟಿನಲ್ಲಿ, ಬತ್ತದ ತಳಿ ಸಂರಕ್ಷಣೆಯ ಕೈಂಕರ್ಯದಲ್ಲಿ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ತಮ್ಮನ್ನೇ ಅರ್ಪಿಸಿಕೊಂಡು 30ಕ್ಕೂ ಅಧಿಕ ನಾಟೀ ತಳಿಗಳನ್ನು ಬೆಳೆಸುತ್ತಿರುವ ಬಂಗಾಡಿ ಕಿಲ್ಲೂರು ದೇವರಾಯರು, ಮಲೆನಾಡಿನಲ್ಲಿ ಲಭ್ಯವಿರುವ 18ಕ್ಕೂ ಮಿಕ್ಕ ತಳಿಗಳನ್ನು ಸಾಮೂಹಿಕವಾಗಿ ಸಂರಕ್ಷಣೆ ಮಾಡುತ್ತಿರುವ ಚಕ್ಕೋಡ ಬಯಲಿನ ಶ್ರೀವತ್ಸ ಹಾಗು ಒಣ ಸೀಮೆಯಲ್ಲಿನ ಹತ್ತಾರು ನಾಡ ತಳಿಗಳನ್ನು ಬೆಂಗಳೂರಿನ ಸಮೀಪ ಬೆಳೆಸುತ್ತಿರುವ ಆಲೂರು ವಿಜಯಕುಮಾರರಂತಹವರ ಅಮೂಲ್ಯ ಅನುಭವಗಳ ಆಧಾರದ ಮೇಲಿನ ಸಂಶೋಧನಾ ಕಾರ್ಯವನ್ನು 'ಹಿತ್ತಲ ಗಿಡ' ಬಳಗ ಕೈಗೆತ್ತಿಕೊಳ್ಳಲಿದೆ.**

ಕ್ಯಾನ್‌ಕೂನ್ ಶೃಂಗ ಸಭೆ ಮತ್ತು ಭತ್ತ ಅವಲಂಬಿತ ಆಹಾರದ ಸಾರ್ವಭೌಮತ್ವ

ಭತ್ತದ ತಳಿ ವೈವಿಧ್ಯದ ಬಗ್ಗೆ ಹೀಗೆ ತೀವ್ರವಾಗಿ ತೊಡಗಿರುವಾಗಲೇ ವಿಶ್ವ ವಾಣಿಜ್ಯ ಸಂಸ್ಥೆ(World Trade Organization)ಯ ಕ್ಯಾನ್‌ಕೂನ್‌ನಲ್ಲಿನ ಐದನೇ ಶೃಂಗ ಸಭೆಯ ಕಾವು ಏರತೊಡಗಿತು. ಈ ವಿಶ್ವ ವಾಣಿಜ್ಯ ಸಂಸ್ಥೆಯ ಕಾರ್ಯಚಟುವಟಿಕೆಗಳ ಅತ್ಯಂತ ಕಟು ಟೀಕಾಕಾರ ಮಿತ್ರ ದೇವೇಂದ್ರ ಶರ್ಮರಿಂದ ಈ ಹಿನ್ನೆಲೆಯಲ್ಲೇ ಏಶಿಯಾದಲ್ಲಿ ಆಹಾರ ಸಾರ್ವಭೌಮತ್ವ ವಿಚಾರದ ಮೇಲೆ ಒಂದು ಪ್ರಬಂಧ ತಯಾರಿಸಿಕೊಡುವಂತೆ ಒತ್ತಡ ಬಂದಿತು. ಈ ವಿಚಾರದ ಮೇಲೆ ಚಿಂತಿಸ ತೊಡಗಿದಾಗ, ಆಶ್ಚರ್ಯವೋ ಎಂಬಂತೆ, ಏಶಿಯಾ ಖಂಡದುದ್ದಕ್ಕೂ ಆಹಾರದ ಸ್ವಾವಲಂಬನೆ, ಜೀವನ ಭದ್ರತೆ, ಕೃಷಿ ಸುಸ್ಥಿರತೆ ಇವೇ ಮುಂತಾದ 'ಆಹಾರದ ಸಾರ್ವಭೌಮತೆ' ವಿಚಾರಗಳು ಭತ್ತದ ಮೇಲೆ ಗಾಢವಾಗಿ ಅವಲಂಬಿತವಾಗಿರುವುದು ಕಂಡು ಬಂದಿರುತ್ತದೆ. ಈ ರಾಷ್ಟ್ರಗಳು ಕೈಗೊಂಡ ಪ್ರಗತಿಪರ ಭೂಸುಧಾರಣಾ ಕ್ರಮಗಳು ಅಷ್ಟೇ ಅರ್ಥಪೂರ್ಣ ಬೆಂಬಲ ಬೆಲೆ, ಸಾರ್ವಜನಿಕ ವಿತರಣೆ, ರೈತರಿಗೆ ರಿಯಾಯ್ತಿಗಳು ಮುಂತಾದ ಕೃಷಿ ಮತ್ತು ಆಹಾರ ನೀತಿಗಳು ಈ ಆಹಾರ ಸಾರ್ವಭೌಮತೆಯನ್ನು ಗಟ್ಟಿ ಮಾಡುವಲ್ಲಿ ಭದ್ರ ಬುನಾದಿ ಹಾಕಿದ್ದವು. ಈಗ ಅವುಗಳು ವಿಶ್ವ ವ್ಯಾಪಾರ, ಜಾಗತೀಕರಣ ಮತ್ತು ಉದರೀಕರಣ ನೀತಿಗಳ ತೀವ್ರ ಹೊಡೆತಕ್ಕೆ ಸಿಕ್ಕಿ ತತ್ತರಿಸುತ್ತಿರುವುದು ಸ್ಪಷ್ಟವಾಗತೊಡಗಿದೆ.

ಈ ಎಲ್ಲಾ ಆಘಾತಗಳನ್ನು ಎದುರಿಸಲು ತೃತೀಯ ಜಗತ್ತಿನ ರಾಷ್ಟ್ರಗಳು ಒಗ್ಗಟ್ಟಾಗಿ ನಿಲ್ಲುವುದೊಂದೇ ದಾರಿಯಾಗಿದೆ. ಈ ನಿಟ್ಟಿನಲ್ಲಿ ಹಲವು ಪರಿಣಾಮಕಾರಿ ಕ್ರಮಗಳನ್ನು ಈ ಲೇಖನದಲ್ಲಿ ಸೂಚಿಸಲಾಗಿರುತ್ತದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ:

(1) 'ಆಹಾರ ಭದ್ರತೆ ಪೆಟ್ಟಿಗೆ (Food Soverignity Box)' ಸ್ಥಾಪನೆಗೆ ಅನುವು ಮಾಡಿಕೊಟ್ಟು, ತೃತೀಯ ಜಗತ್ತಿನ ಪ್ರತಿಯೊಂದು ದೇಶವೂ ರಾಷ್ಟ್ರಮಟ್ಟದಲ್ಲಿ ಆಹಾರದ ಸ್ವಯಂಪೂರ್ಣತೆ ಸಾಧಿಸುವಂತೆ ಮಾಡುವುದು. ಇದಕ್ಕಾಗಿ ಭೂಮಿ, ನೀರು, ಅರಣ್ಯ ಮತ್ತು ಜೈವಿಕ ಸಂಪನ್ಮೂಲಗಳ ಮೇಲಿನ ರೈತರ/ಸಮುದಾಯಗಳ ಒಡೆತನಕ್ಕೆ ಕಿಂಚಿತ್ತೂ ಭಂಗಬಾರದಂತೆ ನೋಡಿಕೊಳ್ಳುವುದು.

(2) ಕೃಷಿ ಮತ್ತು ಆಹಾರಕ್ಕೆ ಸಂಬಂಧಿಸಿದಂತೆ, ವಿಶ್ವ ವ್ಯಾಪಾರ ನಿಯಮಗಳನ್ನು ಆಯಾ ದೇಶಗಳ ಅಗತ್ಯ ಮತ್ತು ಆದ್ಯತೆಗಳಿಗನುಸಾರವಾಗಿ ಮಾರ್ಪಡಿಸಿಕೊಳ್ಳುವ ತೃತೀಯ ಜಗತ್ತಿನ ರಾಷ್ಟ್ರಗಳ ಪರಮಾಧಿಕಾರವನ್ನು ಗಟ್ಟಿಮಾಡುವುದು. ಆಹಾರದ ಸಾರ್ವಭೌಮತೆಗೆ ಸಂಬಂಧಿಸಿದಂತೆ ಯಾವುದೇ ಒಂದು ರಾಷ್ಟ್ರ ಕೈಗೊಳ್ಳುವ ಕಾರ್ಯಕ್ರಮಗಳನ್ನು "ವಿಶ್ವ ವ್ಯಾಪಾರ ಒಪ್ಪಂದ"ವು ಅನಗತ್ಯ ಹಸ್ತಕ್ಷೇಪ ಮಾಡಿ ದುರ್ಬಲಗೊಳಿಸದಂತೆ ನೋಡಿಕೊಳ್ಳುವುದು.

(3) ಪ್ರಸ್ತುತ 'ಬೌದ್ಧಿಕ ಸನದಿನ ಹಕ್ಕು' (Intellectual Property Rights) ವ್ಯವಸ್ಥೆಯು ವಾಣಿಜ್ಯ ಮತ್ತು ಇತಿಮಿತಿಯಿಲ್ಲದ ಲಾಭಕ್ಕೆ ಅದೂ ಬರಿದೇ ವೈಯಕ್ತಿಕಮಟ್ಟದಲ್ಲಿ ಮಾತ್ರ ಪ್ರೋತ್ಸಾಹ ನೀಡುವಂತಹದ್ದು. ಇದಕ್ಕೆ ಆಮೂಲಾಗ್ರ ಬದಲಾವಣೆ ತಂದು, ಸಮೂಹ (Collective) ಮಟ್ಟದಲ್ಲಿ ಸೇವಾ ಮನೋಭಾವನೆಗೆ ಆದ್ಯತೆ ನೀಡುವಂತಹ ಪರ್ಯಾಯ "ಬೌದ್ಧಿಕ ಸನದಿನ ಹಕ್ಕಿನ ವ್ಯವಸ್ಥೆ" ಜಾರಿಗೆ ತರುವ ಪ್ರಯತ್ನ ಮಾಡುವುದು.

(4) ವಿಶ್ವ ವಾಣಿಜ್ಯ ವ್ಯವಹಾರಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಇತಿಮಿತಿ ಇಲ್ಲದ ಪ್ರಭಾವಕ್ಕೆ ಕಡಿವಾಣ ಹಾಕಲು "ಭಾರತೀಯ ಆಹಾರ ನಿಗಮ"ದಂತಹಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನೂ ಮಿಗಿಲಾಗಿ 'ಅಮೂಲ್' ನಂತಹಾ ಸಹಕಾರಿ ಸಂಸ್ಥೆಗಳನ್ನು ಗಟ್ಟಿಮಾಡುವುದು ತುರ್ತು ಅವಶ್ಯಕವಾಗಿರುತ್ತದೆ.

ಈ ಎಲ್ಲಾ ಪರಿಣಾಮಕಾರಿ ಕ್ರಮಗಳ ಅನುಷ್ಠಾನಕ್ಕೆ ಸಾಂಘಿಕ ರೂಪದಲ್ಲಿ ಪ್ರಯತ್ನಿಸಲು ಭಾರತ ಮತ್ತು ಚೀನಾ ದೇಶಗಳು ಕೈಜೋಡಿಸಿ ತೃತೀಯ ಜಗತ್ತಿನ ಮುಂದಾಳತ್ವ ವಹಿಸುವುದು ಅಗತ್ಯವಾಗಿರುತ್ತದೆ. ಇವೆಲ್ಲಾ ಈಡೇರುವವರೆಗೆ ಕನಿಷ್ಠ ಕೃಷಿ ಮತ್ತು ಆಹಾರವಲಯಗಳನ್ನಾದರೂ ವಿಶ್ವ ವಾಣಿಜ್ಯ ಒಪ್ಪಂದದ ಹೊರಗಿಡಬೇಕೆಂದು, ಈ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ.

ವಿ.ಸೂ.: ಈ ಮೇಲೆ ಚರ್ಚಿಸಿದ ಕೃತಿಗಳನ್ನು ಪಡೆದು ಓದ ಬಯಸುವವರು ಇಂಟರ್‌ನೆಟ್ ಮೂಲಕ hittalu@bgl.vsnl.net.in ಸಂಪರ್ಕಿಸಬಹುದು.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ನಿಂಬೆ ಕಾಂಡ ಕೊರಕ ಕೀಟಕ್ಕೆ ಇಂಗು

ನಿಂಬೆ ಗಿಡಗಳಲ್ಲಿ ಕಾಂಡ ಕೊರೆಯುವ ಕೀಟಗಳ ಬಾಧೆ ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗುವ ಸಾಧ್ಯತೆ ಹೆಚ್ಚು. ಗಿಡ ಬೆಳೆದು ಉತ್ತಮ ಫಸಲು ಕೊಡುವ ವೇಳೆಯಲ್ಲಿಯೇ ಈ ಕೀಟದ ಹಾವಳಿಯಿಂದಾಗಿ ಕಾಂಡದ ಸಣ್ಣರಂಧ್ರಗಳಿಂದ ಹಳದಿ ಪುಡಿ ಹೊರಬರುತ್ತದೆ. ಡಿಸೆಂಬರ್ ತಿಂಗಳಲ್ಲಿ ಹೂ ಮತ್ತು ಕಾಯಿಗಳು ಉದುರಲು ಪ್ರಾರಂಭವಾಗಿ ಕ್ರಮೇಣ ಗಿಡ ನಾಶವಾಗುತ್ತದೆ. ಇದರ ನಿವಾರಣೆಗೆ ಎರಡು ಗ್ರಾಂ. ಅಡಿಗೆ ಇಂಗನ್ನು ಮಳೆ ನೀರಿನಿಂದ ಒದ್ದೆಯಾಗದಂತೆ ಮತ್ತು ಅದರ ವಾಸನೆ ಗಿಡಕ್ಕೆ ದೊರೆಯುವಂತೆ ಸಣ್ಣ ಚಿಪ್ಪಿನಲ್ಲಿಇಟ್ಟುಅದರ ಮೇಲೆ ದೊಡ್ಡ ಚಿಪ್ಪನ್ನು ಬೋರಲಾಗಿ ಹಾಕಿ ಇಡಬೇಕು. ಇದರಿಂದ ಕಾಂಡ ಕೊರಕವನ್ನುಸುಲಭವಾಗಿ ನಿಯಂತ್ರಿಸಬಹುದು ಎಂಬುದು ಹಾಸನ ಜಿಲ್ಲೆ, ಚೆನ್ನರಾಯಪಟ್ಟಣ ತಾಲ್ಲೂಕು, ಶ್ರವಣ ಬೆಳಗೊಳದ ಕೆ.ವೈ. ನಂಜೇಗೌಡರ ಅನುಭವ.

ಕೀಟ ಮತ್ತು ರೋಗಗಳ ಹತೋಟಿಗೆ ಸಸ್ಯಜನ್ಯಗಳು

ಬೆಳಗಾವಿ ತಾಲ್ಲೂಕಿನ ಸುತಗಟ್ಟಿಯ ಶ್ರೀ ಅಭಿಯ ಮುತಾಲಿಕ ದೇಸಾಯಿಯವರು ವಿವಿಧ ಸಸ್ಯಜನ್ಯಗಳನ್ನುಪರೀಕ್ಷಿಸಿ ಅವುಗಳ ವಿಶೇಷ ಕೀಟ ಅಥವಾ ರೋಗನಾಶಕ ಗುಣಗಳನ್ನು ಕಂಡುಹಿಡಿದಿದ್ದಾರೆ. ಸಸ್ಯಜನ್ಯಗಳನ್ನು ಅವುಗಳ ವಿಶೇಷ ಗುಣಗಳ ಆಧಾರದ ಮೇಲೆ ವಿವಿಧ ಗುಂಪುಗಳಾಗಿ ವರ್ಗೀಕರಿಸಿದ್ದಾರೆ.

ಗುಣಗಳು	*ಸಸ್ಯ ಜನ್ಯಗಳು*
ಜಠರ ವಿಷಗಳು	ಕರಿಬೇವು, ತಂಬಾಕು
ಸಂಪರ್ಕ ಜಠರ ವಿಷಗಳು	ಸೇವಂತಿಗೆ, ಚೆಂಡು ಹೂ, ಕಲ್ನಾರು, ಸೀತಾ ಫಲ, ಲಂಟಾನ
ಜಠರ ವಿಧಿ, ಬೆಳವಣಿಗೆ ನಿರೋಧಕಗಳು	ಎಕ್ಕ, ಕರಿ ವೀಳ್ಯದೆಲೆ
ವಿಕರ್ಷಕ, ತಾತ್ಕಾಲಿಕ ವಿಷ	ಗ್ಲಿರಿಸಿಡಿಯಾ, ಆಡುಸೋಗೆ
ನಂಜು (ವೈರಸ್) ನಾಶಕ	ಬೋಗನ್ ವಿಲ್ಲಾ
ನಂಜು ನಿರೋಧಕ, ಶಿಲೀಂಧ್ರ ನಾಶಕಗಳು	ಸಾಸಿವೆ, ಬೆಳ್ಳುಳ್ಳಿ
ಶಿಲೀಂಧ್ರ ನಾಶಕ	ಸುವರ್ಣ ಗೆಡ್ಡೆ
ಬ್ಯಾಕ್ಟೀರಿಯಾ ನಾಶಕ	ಬಜೆ
ಕ್ರಿಮಿ ನಾಶಕಗಳು	ಗೋಮೂತ್ರ, ತುಳಸಿ, ಬಿಲ್ವಪತ್ರೆ

ಕಷಾಯ ತಯಾರಿಕೆ: ಒಂದು ಕೆ.ಜಿ. ಆಯಾ ಎಲೆಗಳನ್ನು 10 ಲೀಟರ್ ಕುದಿಸಿದ ನೀರಿನಲ್ಲಿ 24 ಗಂಟೆಗಳ ಕಾಲ ನೆನೆಸಿ, ಸೋಸಿ, ನಂತರ 1:10ರ ಪ್ರಮಾಣದಲ್ಲಿ ನೀರನ್ನು ಬೆರೆಸಿ ಬೆಳೆಗಳಿಗೆ ಸಿಂಪಡಿಸುವುದು. ಇದರಿಂದ ಎಲ್ಲಾ ರೀತಿಯ ರೋಗ ಹಾಗೂ ಕೀಟಗಳ ಹಾವಳಿಯನ್ನು ಯಶಸ್ವಿಯಾಗಿ ತಡೆಯಬಹುದು ಎಂಬುದು ಅವರ ಅನುಭವದ ಹೇಳಿಕೆ.

ಅಡಿಕೆ ಕೊಳೆರೋಗ ನಿಯಂತ್ರಣ

ಅಡಿಕೆ ಹಾಳೆಯನ್ನು ಬೇಕಾದ ಗಾತ್ರದಲ್ಲಿ ಕತ್ತರಿಸಿ, ಪಲ್ಪಿ ಮಾಡಿ ಅದರಿಂದ ತಯಾರಿಸಿದ ಹಾಳೆಯನ್ನು ಗೊನೆಗಳು ತೊಯ್ಯದಂತೆ ಮುಚ್ಚುವುದರಿಂದ ಅಡಿಕೆ ಕೊಳೆರೋಗವನ್ನು ತಡೆಗಟ್ಟಬಹುದು ಎಂಬುದು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕು ಬೈರುಂಬೆಯ ಶ್ರೀ ಕೆ.ಎಂ. ಹೆಗಡೆಯವರ ಸ್ವಂತ ಅನುಭವ.

ಹೆಣ್ಣು ನೊಣಗಳ ಮೋಹಕ ಬಲೆ



ತರಕಾರಿ ಬೆಳೆಗಳಲ್ಲಿ ಹೆಣ್ಣು ನೊಣದ ಬಾಧೆ ತುಂಬಾ ಹಾನಿಕಾರಕ. ಇವುಗಳ ಹತೋಟಿಗೆ ಧಾರವಾಡ ತಾಲ್ಲೂಕಿನ ನಿಗದಿ ಗ್ರಾಮದ ಶ್ರೀ ಎಸ್. ಎಮ್. ಭಂಡಾರಿಯವರು ಸರಳ ಮೋಹಕ ಬಲೆಯೊಂದನ್ನು ತಯಾರಿಸಿದ್ದಾರೆ. ಒಂದು ದೊಡ್ಡ ಮತ್ತೊಂದು ಚಿಕ್ಕ ಭರಣಿಗಳನ್ನು ತೆಗೆದುಕೊಂಡು ಚಿಕ್ಕದರಲ್ಲಿ ಮಿಥೈಲ್ ಯೂಜಿನಾಲ್ (ಯಾವುದೇ ಸುಗಂಧ ದ್ರವ್ಯ) ರಸಾಯನವನ್ನು ತುಂಬಿ ಮುಚ್ಚಳಿಕೆಗೆ ರಂಧ್ರಗಳನ್ನು ಮಾಡಿರುವ ದೊಡ್ಡ ಭರಣಿಯಲ್ಲಿ ಅಳವಡಿಸಲಾಗಿದೆ. ನಂತರ ಸರಪಳಿಯ ಸಹಾಯದಿಂದ ನೇತಾಡುವಂತೆ ಮಾಡಿದಾಗ ಆಕರ್ಷಿತವಾದ ಹೆಣ್ಣು ನೊಣಗಳು ಒಂದು ಮುಚ್ಚಳದ ರಂಧ್ರಗಳ ಮೂಲಕ ಭರಣಿಯೊಳಗೆ ಬೀಳುತ್ತವೆ. ಕೆಳಗಡೆ ನೀರನ್ನು ಹಾಕುವುದರಿಂದ ಅದರೊಳಗೆ ಕೀಟಗಳು ಬಿದ್ದುಸಾಯುತ್ತವೆ.

(ಈ ಮೇಲಿನ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ)

ತೊಂಡೆ ಕಾಯಿ ಕೊರಕಕ್ಕೆ (Heliothis) ಮಡ್ಡಿ ಚಿಕಿತ್ಸೆ

ತೊಂಡೆ ಕಾಯಿ ಬಿಡುವ ಕಾಲಕ್ಕೆ ಕಂಡು ಬರುವ ಕಾಯಿಕೊರಕಗಳ ಹತೋಟಿಗೆ ಹಲವು ದೇಶೀಯ ಕ್ರಮಗಳುಂಟು. ಇವುಗಳಲ್ಲಿ ಗುಜರಾತಿನ ಡಾಂಗ್ ಜಿಲ್ಲೆ ನಂದ್ವಾಡಿ ಗ್ರಾಮದ ರಾಮ್ಜಿಬಾಯಿ ಲಕ್ಷ್ಮಣ್ಜಿ ದೇಶ್‌ಮುಖ್ ಅವರದು ಒಂದು. ಕೀಟಗಳು ಕಂಡು ಬರುವ ಸಮಯಕ್ಕೆ ತೊಂಡೆಯ ಬಳ್ಳಿಗಳ ಮೇಲೆ ಮಡ್ಡಿ (molases) ಯನ್ನು ಸುರಿಯುತ್ತಾರೆ/ಸಿಂಪಡಿಸುತ್ತಾರೆ. ಮಡ್ಡಿಯ ಸಿಹಿಗೆ ಮುತ್ತಿಕೊಳ್ಳುವ ಕಪ್ಪುಇರುವೆಗಳು ಹುಳುಗಳನ್ನು ತಿನ್ನುತ್ತವೆ. ಇರುವೆಗಳು ಹುಳುಗಳ ಅರ್ಧ ಭಾಗವನ್ನು ಮಾತ್ರ ತಿಂದು ಹೊಸ ಹುಳಗಳನ್ನು ಹಿಡಿಯುತ್ತವೆ. ಹೀಗೆ ಈ ಕೀಟದ ಹತೋಟಿ ಸಾಧ್ಯವಾಗಿದೆ. ಈ ಕ್ರಮ ಅನುಸರಿಸಲು ಒಂದು ಎಕರೆಗೆ 50 ಕೆ.ಜಿ. ಮಡ್ಡಿ ಬೇಕಾಗುತ್ತದೆ.

ಕಾಡಿಗೆ ರೋಗಕ್ಕೆ ಔಷಧಿ

ಕೇರಳದ ಪುಲಿಂಕಟ್ಟ ಗ್ರಾಮದ ರೈತರು ತಮ್ಮ ತರಕಾರಿ ಬೆಳೆಗಳಲ್ಲಿ ಕಾಡಿಗೆ ಮತ್ತು ಹಳದಿ ರೋಗದಿಂದಾಗಿ ತೀವ್ರ ನಷ್ಟ ಅನುಭವಿಸುತ್ತಿದ್ದರು. ಜೊತೆಗೆ ಏಡಿಗಳ ಕಾಟವೂ ಹೆಚ್ಚಾಗಿತ್ತು. ಆಗ ರೈತರ ಗುಂಪೊಂದು ಏಡಿ, ತಂಬಾಕು, ಸೋಪು ಮತ್ತು ಸೀಮೆ ಎಣ್ಣೆಗಳನ್ನು ಕೊಳೆಸಿ ರೋಗನಾಶಕ ಒಂದನ್ನು ಅಭಿವೃದ್ಧಿಪಡಿಸುವ ಬಗ್ಗೆ ಯೋಚಿಸಿತು. ಹೀಗೆ ಅಭಿವೃದ್ಧಿಯಾದ ರೋಗನಾಶಕವು ತರಕಾರಿ ಬೆಳೆಗಳಲ್ಲಿನ ಬ್ಯಾಕ್ಟೀರಿಯಾ ರೋಗಗಳಿಗೆ ಪರಿಣಾಮಕಾರಿ ಔಷಧವಂತೆ. ಅದಕ್ಕೂ ಹೆಚ್ಚಾಗಿ ಇದು ಹೊಲಗಳಲ್ಲಿನ ಏಡಿ ಸಂಖ್ಯೆಯನ್ನು ಕಡಿಮೆ ಮಾಡುತ್ತದೆ ಎಂಬುದು ಅವರ ವಾದ.

ಮೂಲ: ಹನಿಬೀ, 14(1), ಮಾರ್ಚ್, 2003.

ಮಧುಮೇಹಕ್ಕೆ ಅಡಿಕೆ ಮದ್ದು !

ಗಡಿನಾಡು ಕಾಸರಗೋಡಿನ ಕುದುರೆಪಾಡಿ ವೆಂಕಟರಮಣ ಭಟ್ಟರು ಒಬ್ಬ ಅಡಿಕೆ ಕೃಷಿಕ. ಒಮ್ಮೆ ಇವರ ತಮ್ಮನ ನಾಯಿ ಚರ್ಮ ರೋಗದಿಂದ ನರಳುತ್ತಿತ್ತು. ಒಂದು ದಿವಸ ಆ ನಾಯಿ ನೆಲದಲ್ಲಿ ಬಿದ್ದಿದ್ದ ಒಣಗಿದ ಅಡಿಕೆಯನ್ನು ಕಚ್ಚಿ ತಿಂದಿತು. ಇದಾದ ನಂತರ ಆ ನಾಯಿ ಪ್ರತಿ ದಿನ ಅಡಿಕೆ ತಿನ್ನಲು ಶುರುಮಾಡಿತು. ಹೀಗೆ ಒಂದು ತಿಂಗಳ ನಂತರ ನಾಯಿಯ ಚರ್ಮ ರೋಗ ಮಾಯವಾಗಿ ನಾಯಿ ಆರೋಗ್ಯಕರವಾಯಿತು. ನಾಯಿಯ ಈ ವಿಶಿಷ್ಟ ನಡವಳಿಕೆಯನ್ನು ಗಮನಿಸಿದ ವೆಂಕಟರಮಣ ಭಟ್ಟರು ಒಬ್ಬ ಮಧುಮೇಹ ರೋಗಿ. ಅಡಿಕೆಯು ಮಧುಮೇಹವನ್ನು ವಾಸಿ ಮಾಡಬಲ್ಲದೆ ಎಂದು ಯೋಚಿಸಿ ಪ್ರತಿದಿನಕ್ಕೆ ಎರಡು ಬಾರಿಯಂತೆ ಅಡಿಕೆ ಪುಡಿಯನ್ನು ಸೇವಿಸುತ್ತಾ ಬಂದರು. ಇವರ ಪ್ರಯೋಗ ಫಲ ನೀಡಿತು. 350ರಷ್ಟಿದ್ದ ಇವರ ರಕ್ತದ ಸಕ್ಕರೆ ಪ್ರಮಾಣ ಕೇವಲ 15 ದಿನಗಳಲ್ಲಿ ಸಾಮಾನ್ಯ (ಸುಮಾರು 120) ಸ್ಥಿತಿಗೆ ಬಂತು. ಇವರ ಯಶಸ್ವಿ ಪ್ರಯೋಗವನ್ನು ತಿಳಿದ, ಮಧುಮೇಹದಿಂದಾಗಿ ಕಣ್ಣಿನ ತೊಂದರೆ ಅನುಭವಿಸುತ್ತಿದ್ದ ಕುಂದೇರಿ ಶ್ಯಾಮ ಭಟ್ಟರು ಇವರನ್ನು ಅನುಸರಿಸಿ ಒಂದು ತಿಂಗಳೊಳಗೆ ಗುಣಮುಖರಾದರು. ಅಡಿಕೆ ಮಧುಮೇಹದ ಮದ್ದಾಯಿತು.

ವಿ.ಸೂ.: ಅಡಿಕೆಗೆ ಮಧುಮೇಹವನ್ನು ಹತೋಟಿ ಮಾಡಬಲ್ಲ ಗುಣವಿದೆ ಎಂಬುದು ಆಂಧ್ರದ ಎನ್.ಟಿ.ಆರ್. ಸ್ವಾಸ್ಥ ವಿಜ್ಞಾನ ವಿಶ್ವ ವಿದ್ಯಾನಿಲಯದ ಇತ್ತೀಚೆಗಿನ ಒಂದು ಪಿ.ಹೆಚ್.ಡಿ ಅಧ್ಯಯನದಿಂದ ದೃಢಪಟ್ಟಿದೆ. - ಸಂ

ಲಕ್ಷ್ಮಣ ಶೆಟ್ಟರ ಚರ್ಮವ್ಯಾಧಿ ಚಿಕಿತ್ಸೆಗಳು

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕು ಕರಿಮೊಗರು ಮನೆಯ ಶ್ರೀ ಲಕ್ಷ್ಮಣ ಶೆಟ್ಟಿಯವರು ಒಬ್ಬ ನಿವೃತ್ತ ಪ್ರಿನ್ಸಿಪಾಲರು. ಅವರು ಹಲವು ಚರ್ಮವ್ಯಾಧಿ ಚಿಕಿತ್ಸಾ ವಿಧಾನಗಳನ್ನು ತಿಳಿಸಿದ್ದಾರೆ. ಚರ್ಮವ್ಯಾಧಿ ಚಿಕಿತ್ಸೆಯಲ್ಲಿ ಔಷಧಿ ಸೇವನೆಗೆ ಮುಂಚೆ ಅತ್ಯವಶ್ಯಕವಾಗಿ ಬೇಧಿ ಔಷಧಿ ತೆಗೆದುಕೊಂಡು ಶರೀರ ಶುದ್ಧಿಮಾಡಿಕೊಳ್ಳಬೇಕು. ದೇಹ ಶುದ್ಧಿಯಾದ ನಂತರ ಈ ಕೆಳಕಂಡ ಔಷಧಿಗಳನ್ನು ಸೇವಿಸಬಹುದು.

ಗರಿಕೆ ಹುಲ್ಲು *(Cynodon dactylon L)*: ಇದು ರಕ್ತಶುದ್ಧಿಕಾರಕ ಮತ್ತು ಶಕ್ತಿ ವರ್ಧಕ. ಒಂದು ಲೀಟರ್ ಉಗುರು ಬೆಚ್ಚಗಿನ ನೀರಿಗೆ 20ಗ್ರಾಂನಷ್ಟು ಉಪ್ಪನ್ನು ಹಾಕಿ, ಉಪ್ಪಿನ ದ್ರಾವಣದಲ್ಲಿ ಸುಮಾರು 12 ಗ್ರಾಂನಷ್ಟು ಗರಿಕೆ ಹುಲ್ಲನ್ನು ಹಾಕಿ. ಅನಂತರ ತಣ್ಣೀರಿನಲ್ಲಿ ಗರಿಕೆ ಹುಲ್ಲನ್ನು ತೊಳೆದು ಸಣ್ಣಗೆ ಕತ್ತರಿಸಿ ಒಂದು ಕುಡ್ತೆ ನೀರಿನೊಂದಿಗೆ ಮಿಕ್ಸರ್‌ನಲ್ಲಿ ರುಬ್ಬಿ ರಸ ತಯಾರು ಮಾಡಿ. ಈ ರಸವನ್ನು ಸೋಸಿ 10 ಮಿಲೀ ಜೇನುತುಪ್ಪ ಸೇರಿಸಿ ಬೆಳಿಗ್ಗೆ ಖಾಲಿ ಹೊಟ್ಟೆಗೆ ಕುಡಿಯಿರಿ. ನಂತರ ಎರಡು ಗಂಟೆಯ ತನಕ ಆಹಾರ ಸೇವಿಸಕೂಡದು ಮತ್ತು ದಿನಕ್ಕೆ 4 ರಿಂದ 5 ಲೀಟರ್ ನೀರು ಕುಡಿಯಬೇಕು.

ಕಜ್ಜಿ ಇಸುಬು, ತುರಿಕೆ ಇರುವವರು ಗರಿಕೆ ರಸವನ್ನು ಮೇಲೆ ಹೇಳಿದ ರೀತಿಯಲ್ಲಿ ಮೂವತ್ತು ದಿನ ಸೇವಿಸಿ ದಿನಕ್ಕೆ ಐದಾರು ಸಲ ನಿಂಬೆ ಮತ್ತು ತುಳಸಿ ರಸವನ್ನು ಹಚ್ಚಿದರೆ ಈ ಚರ್ಮವ್ಯಾಧಿಗಳು ವಾಸಿಯಾಗುತ್ತವೆ. ಸೋರಿಯಾಸಿಸ್ ಕಾಯಿಲೆ ಹರಡಿರುವ ಭಾಗಕ್ಕೆ ಗರಿಕೆ ರಸವನ್ನು ಲೇಪಿಸಿ ಮೇಲೆ ಹೇಳಿದ ರೀತಿಯಲ್ಲಿ ಗರಿಕೆ ರಸ ತಯಾರಿಸಿ ಕುಡಿದರೆ ಕಾಯಿಲೆ ಗುಣವಾಗುತ್ತದೆ.

ಬೇವು: ತೆಂಗಿನೆಣ್ಣೆಯಲ್ಲಿ ಕಹಿ ಬೇವಿನ ಹಸಿ ಸೊಪ್ಪನ್ನು ಕರಿದು 20 ರಿಂದ 30 ದಿನ ಹಚ್ಚಿದರೆ ಅಥವಾ ಬೇವಿನ ಎಲೆಯನ್ನು ಸುಟ್ಟು ಬೂದಿ ಮಾಡಿ ಭಸ್ಮವನ್ನು ಎಣ್ಣೆಯಲ್ಲಿ ಕಲಸಿ ಹಚ್ಚಿದರೆ ತುರಿ ಕಜ್ಜಿ ಮುಂತಾದ ಚರ್ಮವ್ಯಾಧಿಗಳು ವಾಸಿಯಾಗುತ್ತವೆ.

ತೆಂಗು: ತೆಂಗಿನ ಗರಟೆಯನ್ನು ಕರಿ ಮಾಡಿ ಸಾಸಿವೆ ಎಣ್ಣೆಯಲ್ಲಿ ಕಲಸಿ 35 ದಿನ ಹಚ್ಚಿದರೆ ಗಜಕರ್ಣ ನಿವಾರಣೆಯಾಗುವುದು.

ಒಂದೆಲಗ *(Centella asiatica L)* : ಒಂದೆಲಗವನ್ನು ಬೇರು ಸಹಿತ ಕಿತ್ತು ನೆರಳಿನಲ್ಲಿ ಒಣಗಿಸಿ ಚೂರ್ಣ ಮಾಡಿ ದಿನಕ್ಕೆ ಎರಡು ಗ್ರಾಂ. ಚೂರ್ಣವನ್ನು ಐದು ಗ್ರಾಂ. ಜೇನಿನಲ್ಲಿ ಬೆರೆಸಿ ನಲವತ್ತು ದಿನಗಳ ಕಾಲ ಎರಡೂ ಹೊತ್ತು ಸೇವಿಸಿದಲ್ಲಿ ಚರ್ಮರೋಗಗಳು ಗುಣವಾಗುತ್ತವೆ.

ಕರಿ ನೆಕ್ಕಿ (ಲಕ್ಕಿ) *(Vitex negundo L)*: ಕರಿನೆಕ್ಕಿಯ ಪಂಚಾಂಗದ ಚೂರ್ಣಕ್ಕೆ ಗೋಮೂತ್ರವನ್ನು ಸೇರಿಸಿ ಸೇವಿಸಿದಲ್ಲಿ ಚರ್ಮವ್ಯಾಧಿ ವಾಸಿಯಾಗುತ್ತದೆ.

ಸಹದೇವಿ *(Vermoniae inurea)*: ಸಹದೇವಿ ಬೀಜದ ಚೂರ್ಣ ಮತ್ತು ಕರಿಮೆಣಸಿನ ಚೂರ್ಣಗಳನ್ನು ಮಿಶ್ರ ಮಾಡಿ ಬೆಳಿಗ್ಗೆ ದಿನಕ್ಕೊಂದು ಬಾರಿ ಉಗುರು ಬೆಚ್ಚಗಿನ ನೀರಿಗೆ ಹಾಕಿ ಕದಡಿ ಸುಮಾರು ಒಂದು ವರ್ಷದ ತನಕ ಸೇವಿಸಿದಲ್ಲಿ ತೊನ್ನು ಮತ್ತು ಸೋರಿಯಾಸಿಸ್ ಚರ್ಮರೋಗಗಳು ನಿವಾರಣೆಯಾಗುತ್ತವೆ.

ಉತ್ತರಣೆ *(Achysunthes aspera L)*: ಕೆಂಪು ಉತ್ತರಣೆ ಗಿಡವನ್ನು ಕಿತ್ತು ಸಮೂಲ ಸುಟ್ಟು ಬೂದಿ ಮಾಡಿ ಅದರ ನಾಲ್ಕು ತೊಲ ಭಸ್ಮ, ಒಂದು ತೊಲ ಸುಣ್ಣ, ಒಂದು ತೊಲ ಅರಿಶಿಣವನ್ನು ಶೋಧಿಸಿ ಗೋಮೂತ್ರದಲ್ಲಿ ಅರೆದು ಹಚ್ಚಿದರೆ ಇಸುಬು ಗುಣವಾಗುತ್ತದೆ.

ಸಂಗ್ರಹ: ಸುದರ್ಶನ, ಪುತ್ತೂರು

ಕರಿಗಣಿಕೆ ಮತ್ತು ಬಿಳಿಗರಿಕೆ ಮಹತ್ವ

ಕರಿಗಣಿಕೆ ಸೊಪ್ಪಿನ ಬಜ್ಜಿಯನ್ನು ವಾರಕ್ಕೊಮ್ಮೆ ಸೇವಿಸಿದರೆ ಮೊಳೆ ರೋಗ (ಪೈಲ್ಸ್) ಬರುವುದಿಲ್ಲ ಮತ್ತು ಬಿಳಿಗರಿಕೆ ಹುಲ್ಲನ್ನು ನಾಟಿ ಹಸುವಿನ ನೊರೆ ಹಾಲಿನಲ್ಲಿ ಅರೆದು ಹಾಲಿನೊಂದಿಗೆ (ಒಂದು ಲೋಟ ಹಾಲಿಗೆ ಒಂದು ಹಿಡಿ ಹುಲ್ಲು) ಬೆರೆಸಿ ಕುಡಿಸುತ್ತಾ ಬಂದರೆ ಮಕ್ಕಳಿಗೆ ಬರುವ "ಹಕ್ಕಿ ಕಾಯಿಲೆ" ನಿವಾರಣೆಯಾಗುತ್ತದೆ ಎಂಬುದು ಹಾಸನ ಜಿಲ್ಲೆ ಚನ್ನರಾಯ ಪಟ್ಟಣ ತಾಲ್ಲೂಕು ತಗಡೂರಿನ ಕೆ.ಆರ್. ಮಂಜುಳರವರು ಕಂಡುಕೊಂಡಿರುವ ಉಪಾಯ.

ನಿಂಬೆಹಣ್ಣಿನ ಸಿಪ್ಪೆಯಿಂದ ವಾಂತಿ ನಿವಾರಣೆ

ನಿಂಬೆಹಣ್ಣಿನ ರಸ ತೆಗೆದು ಬಿಸಾಡುವ ಸಿಪ್ಪೆಗಳನ್ನು ಸಂಗ್ರಹಿಸಿ ಒಣಗಿಸಿ ಕಪ್ಪಾಗುವಂತೆ ಕೆಂಡದಲ್ಲಿ ಹುರಿದು ಪುಡಿಮಾಡಿ ಜೇನು ತುಪ್ಪದೊಂದಿಗೆ ಸೇವಿಸಿದರೆ ವಾಂತಿ ಬಾರದು ಎನ್ನುತ್ತಾರೆ ತಗಡೂರಿನ ಟಿ.ಎಲ್. ಲಾವಣ್ಯ.

ಮಲಬದ್ಧತೆ, ಮಧುಮೇಹ ಮತ್ತು ಗಂಟಲು ನೋವು ನಿವಾರಣೆ

ತಗಡೂರಿನ ಲಿಂಗದೇವರು ಅವರ ಅನುಭವದಂತೆ ಪೆಟ್ಟಿಗೆಸೊಪ್ಪು ಗಿಡದ ಎರಡು ಎಲೆಗಳನ್ನು ಪ್ರತಿ ದಿನ ಸೇವಿಸಿದರೆ ಮಲಬದ್ಧತೆ ನಿವಾರಣೆಯಾಗುತ್ತದೆ. ಬಿಳಿ ಕಾಶಿ ಕಣಗಲದ ಎರಡು-ಮೂರು ಎಲೆಗಳನ್ನು ಪ್ರತಿ ದಿನ ತಿನ್ನುತ್ತಾ ಬಂದರೆ ಮಧುಮೇಹ ವಾಸಿಯಾಗುತ್ತದೆ. ಗುಲಗಂಜಿ ಎಲೆಯನ್ನು ತಿನ್ನುತ್ತಾ ಬಂದರೆ ಗಂಟಲು ನೋವು ನಿವಾರಣೆಯಾಗಿ ಮಧುರ ಕಂಠ ಪ್ರಾಪ್ತವಾಗುತ್ತದೆ.

ಇಸುಬಿಗೆ ಬೆಳ್ಳುಳ್ಳಿ ನಿಂಬೆರಸ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದ ನಂಜುಂಡಯ್ಯನವರು ಇಸುಬಿಗೆ ನಿಂಬೆರಸದೊಂದಿಗೆ ಬೆಳ್ಳುಳ್ಳಿ ಇಲುಕು ಮತ್ತು ಅದರ ಎಲೆಗಳನ್ನು ಸೇರಿಸಿ ಲೇಹ ತಯಾರಿಸಿ ಲೇಪಿಸುತ್ತಾರೆ. ಹೀಗೆ ಲೇಪಿಸುವುದರಿಂದ 48 ಗಂಟೆಗಳ ಕಾಲ ಉರಿ ಕಂಡು ಬಂದರೂ ಇಸುಬು ಶಾಶ್ವತವಾಗಿ ಗುಣವಾಗುತ್ತದೆಯಂತೆ.

ಅಮೃತ ಬಳ್ಳಿಯಿಂದ ಶರೀರದ ತೂಕ ಕಡಿಮೆ ಮಾಡಿಕೊಳ್ಳಿ


ಅರ್ಧ ಅಡಿ ಅಮೃತ ಬಳ್ಳಿಯನ್ನು ತೆಗೆದುಕೊಂಡು ಅದರ ಮೇಲಿನ ಸೂಕ್ಷ್ಮ ಪೊರೆ ತೆಗೆದು, ತುಂಡರಿಸಿ, ಜಜ್ಜಿ ನಾಲ್ಕು ಲೋಟ ನೀರಿನೊಂದಿಗೆ ಸೇರಿಸಿ ಒಂದು ಲೋಟ ಕಷಾಯ ಉಳಿಯುವವರೆಗೂ ಕುದಿಸಿ. ಈ ಕಷಾಯವನ್ನು ಪ್ರತಿನಿತ್ಯ ಕುಡಿಯುತ್ತಾ ಬಂದರೆ ಶರೀರದ ತೂಕ ಎರಡು ತಿಂಗಳಲ್ಲಿ ಕಡಿಮೆಯಾಗುತ್ತದೆ ಎಂಬುದು ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ನೊಣವಿನಕೆರೆಯ ಸದಾನಂದ ಅವರು ಕಂಡು ಕೊಂಡ ಸತ್ಯ.

ಸಂಗ್ರಹ: ಬಸವರಾಜು ಸಂತೇಶಿವರ

(ಈ ಮೇಲಿನ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ).

ಬಾಣಪ್ಪನವರ ಪಶು ಔಷಧಿಗಳು

ಹಾಸನ ಜಿಲ್ಲೆ, ಚನ್ನರಾಯ ಪಟ್ಟಣ ತಾಲ್ಲೂಕು ಜುಟ್ಟನಹಳ್ಳಿಯ ಬಾಣಪ್ಪನವರ ಪ್ರಕಾರ ಹಸುಗಳಲ್ಲಿ ಹಾಲು ಇಂಗಿ ಹಾಲು ಬರದಿದ್ದರೆ ಹತ್ತು 'ಸ್ವರವಿನ ಗೆಡ್ಡೆ', ಒಂದು ಪಾವು 'ಉದ್ದಿನ ಬೇಳೆ' ಮತ್ತು ಒಂದು ಪಾವು 'ಅವರೆ ಕಾಳು'ಗಳನ್ನು ರುಬ್ಬಿ ದಿನಕ್ಕೆ ಮೂರು ಬಾರಿ ಕುಡಿಸಿದರೆ ಎರಡನೇ ದಿನದಿಂದ ಹಾಲು ಬರಲು ಪ್ರಾರಂಭವಾಗಿ ಒಂದು ವಾರದಲ್ಲಿ ಹೆಚ್ಚು ಹಾಲು ಕೊಡಲು ಪ್ರಾರಂಭಿಸುತ್ತದೆಯಂತೆ. ಹಸುಗಳು ಕರು ಹಾಕಿದ ಬಳಿಕ ಗರ್ಭಕೋಶ ಹೊರಬರದಿದ್ದರೆ ಆನೆನಗ್ಗಿನ ಗಿಡದ ಎಲೆ ಮತ್ತು ಹಾಲುವಾಣದ ಸೊಪ್ಪುಗಳನ್ನು ರುಬ್ಬಿ ನೀರಿನಲ್ಲಿ ಹಾಕಿ ಕುಡಿಸಿದರೆ ಅರ್ಧ ಗಂಟೆಯಲ್ಲಿ ಗರ್ಭಕೋಶದ ಒಳಹೋಗಿ ಕಸ (ಸತ್ತೆ) ಹೊರಬೀಳುವುದು.



ಇದರ ಜೊತೆಗೆ ಶ್ರೀ ಬಾಣಪ್ಪನವರು ದನಗಳ ಕೆಚ್ಚಲು ಬಾವಿಗೆ ವಿವಿಧ ರೀತಿಯ ನಾಲ್ಕು ಸಸ್ಯಗಳನ್ನು ಸೇರಿಸಿ ಕಷಾಯ ಮಾಡಿ ಕುಡಿಸಿ ಕೆಚ್ಚಲಿಗೆ ಲೋಳೆಸರ (*Aloevera L.*)ವನ್ನು ಹಚ್ಚುವುದರಿಂದ ಈ ರೋಗಗಳನ್ನು ನಿವಾರಣೆ ಮಾಡುತ್ತಾರೆ. ಹಾಸನ ಜಿಲ್ಲೆಯ ಪಶುವೈದ್ಯರು ತಮ್ಮಿಂದ ನಿವಾರಣೆಯಾಗದ ರೋಗಪೀಡಿತ ಹಸುಗಳನ್ನು ಇವರಲ್ಲಿಗೆ ಕಳುಹಿಸುತ್ತಾರಂತೆ. ಈ ರೀತಿ ಇವರ ಹೆಸರು ಹಾಸನ ಜಿಲ್ಲೆಯಾದ್ಯಂತ ಹೆಸರುವಾಸಿಯಾಗಿದೆ.

ಗಾಯದ ಕೀಟಗಳಿಗೆ ಔಷಧಿ

ಸಂತೇಶಿವರದ ನಿಂಗಪ್ಪನವರು ತಮ್ಮ ಸಾಕು ಪ್ರಾಣಿಗಳಲ್ಲಿ ಗಾಯಗಳಾಗಿ, ವ್ರಣವಾಗಿ ಹುಳು ಬಿದ್ದಾಗ ಬಿದಿರು ಕಳ್ಳಿಯಿಂದ ರಸ ತೆಗೆದು ಗಾಯಗಳ ಮೇಲೆ ಸುರಿಯುತ್ತಾರೆ. ಹೀಗೆ ಸುರಿಯುವುದರಿಂದ ಹುಳುಗಳು ನಿವಾರಣೆಯಾಗಿ ಗಾಯ ಬೇಗ ಗುಣವಾಗುತ್ತದೆ ಅಲ್ಲದೆ ಹುಳುಗಳು ತಕ್ಷಣ ಸಾಯುತ್ತವೆಯಂತೆ.

ಕೆಚ್ಚಲು ಬಾವಿಗೆ ಚಕ್ಕೆ ಮದ್ದು

ವಿಶೇಷವಾಗಿ ಸುಧಾರಿತ ಪಶು ತಳಿಗಳಿಗೆ ಕೆಚ್ಚಲು ಬಾವು ಬಂದರೆ ನೂರು ಗ್ರಾಂ ಬೇವಿನ ಚಕ್ಕೆ, ನೂರು ಗ್ರಾಂ ಬುಗರಿ (*Thespesia populnea*, Car.) ಚಕ್ಕೆಗಳನ್ನು ಪುಡಿ ಮಾಡಿ 1 ಲೀಟರ್ ನೀರಿನಲ್ಲಿ ನೆನೆ ಹಾಕಿ ಒಂದು ಗಂಟೆ ನಂತರ ಚಕ್ಕೆ ಪುಡಿ ಬೇರ್ಪಡಿಸಿ ಕಲಗಚ್ಚಿ (ಮುಸರೆ)ಗೆ ಹಾಕಿ 3 ದಿನ ಕುಡಿಸಿದರೆ ಕೆಚ್ಚಲ ಬಾವು ನಿವಾರಣೆಯಾಗುವುದನ್ನು ಚೆನ್ನರಾಯಪಟ್ಟಣ ತಾಲ್ಲೂಕು ಹೊಸಹಳ್ಳಿಯ ಸಣ್ಣೇಗೌಡರು ಕಂಡುಕೊಂಡಿರುವರು.

ಸಂಗ್ರಹ: ಬಸವರಾಜು ಸಂತೇಶಿವರ

ಪಶುಗಳ ಉದರ ಬೇನೆಗೆ ಮೂರು ಬಗೆಯ ಉಪಚಾರಗಳು

ಹೊಟ್ಟೆ ಉಬ್ಬರಕ್ಕೆ ಕಷಾಯ

ದನಗಳಲ್ಲಿ ಹೊಟ್ಟೆ ಉಬ್ಬರ ಕಂಡು ಬಂದಾಗ ಗಜ್ಜಗದ (*Caesalpinia jayabo*, Maza) ಬೀಜ ಮತ್ತು ಟೀ ಪುಡಿ (10 ಗ್ರಾಂ)ಗಳನ್ನು ನೀರಿನಲ್ಲಿ ಕುದಿಸಿ ಕುಡಿಸಿದರೆ ಅರ್ಧ ಗಂಟೆಯಲ್ಲಿ ಉಬ್ಬರ ಇಳಿದು ನೋವು ಶಮನವಾಗುತ್ತದೆ ಎಂಬುದು ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದ ನಂಜಪ್ಪನವರ ಅನುಭವ.

ಮೆಲುಕು ಹಾಕಿಸಲು

ರಾಸುಗಳು ಹುಲ್ಲನ್ನು ಮೇಯ್ದು ವಿಶ್ರಾಂತಿ ವೇಳೆ ಮೆಲುಕು ಹಾಕುತ್ತವೆ. ಆದರೆ ಮೇವು ಅತಿ ಹೆಚ್ಚಾಗಿ ಮೆಲುಕು ಹಾಕಲು ಸಾಧ್ಯವಾಗದೆ ಹೊಟ್ಟೆ ಉಬ್ಬಿ ರಾಸುಗಳು ಮಂಕಾಗಿ ನಿಲ್ಲುತ್ತವೆ. ಈ ರೀತಿ ಮೆಲುಕು ಹಾಕದೆ ನಿಂತಾಗ 2 ಅಡಿ ಉದ್ದದ ಎಕ್ಕದ ಕಡ್ಡಿ ತೆಗೆದುಕೊಂಡು ಕಡಿಯಲು ಬಾಯಿಗೆ ಕೊಟ್ಟಾಗ ತಕ್ಷಣ ಮೆಲುಕು ಬಾಯಿಗೆ ಬಂದು ರಾಸುಗಳು ಮೆಲುಕು ಹಾಕಲು ಶುರುಮಾಡುತ್ತವೆ ಎನ್ನುತ್ತಾರೆ ಸಂತೇಶಿವರದ ರಂಗಪ್ಪ.

ಸಂಗ್ರಹ: ಬಸವರಾಜು ಸಂತೇಶಿವರ

ಹೊಟ್ಟೆ ಹುಳುಗಳಿಗೆ ಹಾಲದ ಬೇರು

ಪ್ರಾಣಿಗಳು ಹೊಟ್ಟೆಯ ಹುಳುಗಳ ಬಾಧೆಯಿಂದಾಗಿ ಹೊಟ್ಟೆ ಉಬ್ಬರ ಮತ್ತು ನೋವಿನಿಂದ ನರಳುತ್ತವೆ. ಇದಕ್ಕೆ ಸೂಕ್ತ ಔಷಧಿ ನೀಡದಿದ್ದಲ್ಲಿ ಎಳೆಯ ಪ್ರಾಣಿಗಳು ಸಾಯಲೂಬಹುದು. ಇದಕ್ಕೆ ಗುಜರಾತಿನ ದೇವರಾಮಭಾಯಿ ಮನಿಯಭಾಯಿ ಠಾಕ್ರೆ ಅವರ ಬಳಿ ಒಂದು ಪರಿಹಾರವಿದೆ. ಇವರ ಪ್ರಕಾರ, ಇಪ್ಪತ್ತು ಗ್ರಾಂ ಆಲದ ಮರದ ತಂತು (ಬೀಳಲುಗಳು) ಬೇರನ್ನು ಜಜ್ಜಿ ನೂರು ಮಿಲಿ ನೀರಿನಲ್ಲಿ ಬೆರೆಸಿ ಬಾಧೆಗೊಳಗಾದ ಪ್ರಾಣಿಗಳಿಗೆ ದಿನಕ್ಕೆ ಎರಡು ಬಾರಿ ಕೊಡಬೇಕು. ಇದರಿಂದ ಪ್ರಾಣಿಗಳು ಸಂಪೂರ್ಣವಾಗಿ ಗುಣಮುಖವಾಗುತ್ತವೆ ಎಂಬುದು ಠಾಕ್ರೆಯವರ ವಾದ. ಇದನ್ನು ಬಹುತೇಕ ಎಲ್ಲಾ ಹಳ್ಳಿಗರು ಅನುಸರಿಸುತ್ತಾರಂತೆ.

ಮೂಲ: ಹನಿಬೀ 14(1), ಮಾರ್ಚ್, 2003

ಹಿಡ ಹೊಡೆದ (Vasectomy) ಹೋರಿ ಕರುಗಳ ಹಾರೈಕೆ

ಹೋರಿ ಕರುಗಳು ಆರೋಗ್ಯಕರವಾಗಿ ಬೆಳೆಯಲಿ ಎಂಬ ಉದ್ದೇಶದಿಂದ ರೈತರು ಬೀಜ/ಹಿಡ/ಆಣಿ ಹೊಡೆಸುವುದು (Vasectomy) ಸಾಮಾನ್ಯ. ಇದರಿಂದ ಬೀಜಗಳಲ್ಲಿ ಕೀವು ಬೆಳೆದು ತೊಂದರೆಯಾಗುತ್ತದೆ. ಈ ರೀತಿಯ ತೊಂದರೆಗಳನ್ನು ತಪ್ಪಿಸಲು ಗುಜರಾತಿನ ಡಾಂಗ್ಸ್ ಜಿಲ್ಲೆಯ ಶಿವರಾಮ ಭಾಯಿ ಜವರಭಾಯಿ ಸಹರೆ ಅವರು ಹಿಡ ಮಾಡಿಸಿದ ಕರು ಅಥವಾ ಎತ್ತುಗಳಿಗೆ ಬಾಳೆ ರಸವನ್ನು ಕುಡಿಸುತ್ತಾರೆ. ಹೀಗೆ ಕುಡಿಸುವುದರಿಂದ ನೋವು ನಿವಾರಿಸುವ ಜೊತೆಗೆ ಕೀವು ಕಟ್ಟುವುದನ್ನು ತಡೆಯುತ್ತದೆಯಂತೆ.

ಮೂಲ: ಹನಿಬೀ 14(1), ಮಾರ್ಚ್, 2003

(ಈ ಮೇಲಿನ ಎಲ್ಲಾ ಕರ್ನಾಟಕದ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ).

ಈರುಳ್ಳಿ ಗೂಡು ಹಾಕುವ ವಿನೂತನ ಪದ್ಧತಿ

ಸಾಮಾನ್ಯವಾಗಿ ಈರುಳ್ಳಿ ಬೆಳೆ ಸೆಪ್ಟೆಂಬರ್ ತಿಂಗಳಲ್ಲಿ ಕೀಳಲು ಬರುವುದರಿಂದ ಮಳೆಗೆ ಕೊಳೆಯುವ ಸಾಧ್ಯತೆ ಇದೆ ಮತ್ತು ಮನೆಯಲ್ಲಿ ಹಸಿ ಈರುಳ್ಳಿಯನ್ನು ಶೇಖರಿಸಿ ಇಡಲು ಸಾಧ್ಯವಿಲ್ಲ. ಈರುಳ್ಳಿ ಗೆಡ್ಡೆಯನ್ನು ಹೊಲದಲ್ಲಿ ಗೂಡು ಹಾಕಿ ಮಳೆ, ಬಿಸಿಲಿನಿಂದ ಸಂರಕ್ಷಿಸಿ ಎರಡರಿಂದ ಮೂರು ತಿಂಗಳುಗಳ ಕಾಲ ಹೊಲದಲ್ಲೇ ಸಂಸ್ಕರಿಸಿ ಇಡಲು ಅನುಕೂಲಕರವಾದ ಪದ್ಧತಿಯೊಂದನ್ನು ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು ಹಲಗೇರಿಯ ಭರಮಗೌಡ ಸಿದ್ದಬಸಪ್ಪ ಕರಿಬಸಳ್ಳವರ ಅವರು ಕಂಡು ಹಿಡಿದಿದ್ದಾರೆ.

ಮೊದಲನೆಯ ಹಂತ: ಹೊಲದಲ್ಲಿ ಎತ್ತರವಾದ ಮಳೆ ನೀರು ನಿಲ್ಲದಂತಹ ಜಾಗದಲ್ಲಿ ಮಣ್ಣಿನ ಹಾಸಿಗೆ ಅಥವಾ ಕಟ್ಟೆಯನ್ನು ತಯಾರಿಸಬೇಕು. 2 ಅಡಿ ಅಗಲವಾಗಿ ಮತ್ತು 2 ಇಂಚು ಎತ್ತರದ ವೃತ್ತಾಕಾರದ ಮಣ್ಣಿನ ಹಾಸಿಗೆ ತಯಾರಿಸಿ ಪ್ರತಿ ಹಾಸಿಗೆಗೆ 5 ಗ್ರಾಂ. ಫೋರೇಟ್ ಹರಳುಗಳನ್ನು ಹಾಕಬೇಕು ಇದು ಯಾವುದೇ ಕ್ರಿಮಿ ಅಥವಾ ಹುಳುಗಳು ಈರುಳ್ಳಿ ಗಡ್ಡೆಯನ್ನು ಹಾಳು ಮಾಡುವುದನ್ನು ತಡೆಯುತ್ತದೆ. ನಂತರ 2 ಇಂಚು ಎತ್ತರವಾಗಿ ಜಯದರ್ ಹತ್ತಿ ಕಟ್ಟಿಗೆಯನ್ನು ಅಥವಾ ಮೆಣಸಿನ ಕಟ್ಟಿಗೆಯನ್ನು ಹಾಸಿಗೆ ತುಂಬಾ ಹರಡಬೇಕು. ಇದರಿಂದ ಮಳೆ ಬಂದಾಗ ಈರುಳ್ಳಿ ಮಣ್ಣಿನ ಹಾಸಿಗೆ ಮೇಲೆ ಬೇರು ಬಿಡುವುದಿಲ್ಲ.

ಹಾಸಿಗೆ ತಯಾರಿಸಿದ ನಂತರ ಸೊಪ್ಪು ಸಹಿತವಿರುವ ಈರುಳ್ಳಿಯನ್ನು ಕಿತ್ತು ಹಾಸಿಗೆ ಮೇಲೆ ಸೊಪ್ಪು ಹೊರಗೆ ಮಾಡಿ ಈರುಳ್ಳಿಗಡ್ಡೆ ಒಳಗೆವಿರುವಂತೆ ವೃತ್ತಾಕಾರವಾಗಿ ಇಡುತ್ತಾ ಹೋಗಬೇಕು ಮತ್ತು ಮಧ್ಯದಲ್ಲಿ 6 ಇಂಚು ಖಾಲಿ ವೃತ್ತಾಕಾರದ ಜಾಗವಿರಬೇಕು. ಒಂದೂವರೆ ಅಡಿ ಎತ್ತರವಾಗಿ ಹಾಕಿಯಾದ ಮೇಲೆ ಈರುಳ್ಳಿ ಗಡ್ಡೆ ಸಮಾನಾಂತರ ಮಾಡಿ ಸ್ವಲ್ಪ ಜಯಧರ್ ಹತ್ತಿ ಕಟ್ಟಿಗೆಯನ್ನು ಗೂಡಿನ ಮೇಲೆ ಹರಡಬೇಕು. ಇದರಿಂದ ಮೇಲೆ ಇಡುವ ಈರುಳ್ಳಿಗಡ್ಡೆ ಕೆಳಕ್ಕೆ ಕುಸಿಯುವುದಿಲ್ಲ ಮತ್ತೆ ಈರುಳ್ಳಿಗಡ್ಡೆಯನ್ನು ವೃತ್ತಾಕಾರವಾಗಿ ಮತ್ತು ತ್ರಿಭುಜಾಕಾರದಲ್ಲಿ ಎತ್ತರವಾಗಿ ಒಂದು ಅಡಿ ಇಡಬೇಕು. ಗೂಡಿನ ಮೇಲುಭಾಗದಲ್ಲಿ ಸ್ವಲ್ಪ ಕಳೆ ತೆಗೆದ ಹುಲ್ಲನ್ನು ಹಾಕಬೇಕು. ಇದರಿಂದ ಮಳೆ ಬಂದರೆ ನೀರು ಗೂಡಿನ ಒಳಗೆ ಹೋಗುವುದಿಲ್ಲ. ಪ್ರತಿ ಗೂಡಿಗೆ ಸುಮಾರು 40 ರಿಂದ 50 ಕೆ.ಜಿ ಈರುಳ್ಳಿಯನ್ನು ಹಾಕಬಹುದು.

ಎರಡನೆಯ ಹಂತ: ಎಂಟರಿಂದ ಹತ್ತು ದಿನಗಳಾದ ನಂತರ ಮೇಲೆ ಹಾಕಿದ ಮೂರರಿಂದ ನಾಲ್ಕು ಈರುಳ್ಳಿ ಗೂಡೆಗಳನ್ನು ಸೇರಿಸಿ ಒಂದು ಗೂಡನ್ನು ತಯಾರಿಸಬೇಕು. ಈ ಹಂತದಲ್ಲಿ ಮೂರರಿಂದ ಮೂರೂವರೆ ಅಡಿ ಅಗಲವಾದ ವೃತ್ತಾಕಾರದ 6 ಇಂಚು ಎತ್ತರದ ಮಣ್ಣಿನ ಹಾಸಿಗೆಯನ್ನು ತಯಾರಿಸಬೇಕು. ಪ್ರತಿ ಹಾಸಿಗೆಗೂ 5 ಗ್ರಾಂ ಫೋರೇಟ್ ಹರಳುಗಳನ್ನು ಹಾಕಬೇಕು ಮತ್ತು ಹಾಸಿಗೆ ಮೇಲೆ ಜಯದರ್ ಹತ್ತಿ ಕಟ್ಟಿಗೆಯನ್ನು ಹರಡಬೇಕು. ಹಾಸಿಗೆ ತಯಾರಿಸಿದ ಮೇಲೆ ಮೊದಲು ಹಾಕಿದ ಈರುಳ್ಳಿ ಗೂಡನ್ನು ತೆಗೆದು ಈರುಳ್ಳಿ ಗಡ್ಡೆ ಒಳಗೆ ಇರುವಂತೆ ಸೊಪ್ಪು ಹೊರಗೆ ಇರುವಂತೆ ವೃತ್ತಾಕಾರವಾಗಿ ಇಡುತ್ತಾ ಹೋಗಬೇಕು ಮತ್ತು ಮಧ್ಯದಲ್ಲಿ 9 ಇಂಚು ವೃತ್ತಾಕಾರವಾದ ಖಾಲಿ ಜಾಗ (ಪೊಳ್ಳು) ಇರಬೇಕು, ಒಂದು ಅಡಿ ಎತ್ತರವಾದ ಮೇಲೆ ಮತ್ತು ಎರಡು ಅಡಿ ಎತ್ತರವಾದ ಮೇಲೆ ಈ ಎರಡು ಬಾರಿ ಗಡ್ಡೆಯನ್ನು ಸಮಾಂತರ ಮಾಡಿ ಜಯಧರ್ ಹತ್ತಿ ಕಟ್ಟಿಗೆಯನ್ನು ಹರಡಬೇಕು. ಎರಡು ಅಡಿ ಎತ್ತರವಾದ ಮೇಲೆ ಈರುಳ್ಳಿ ಗಡ್ಡೆಯನ್ನು ತ್ರಿಭುಜಾಕಾರವಾಗಿ ಇಡುತ್ತಾ ಗೂಡನ್ನು 3 ರಿಂದ ಮೂರೂವರೆ ಎತ್ತರವಾಗಿ ಹಾಕಿ ಕೂಡಿಸಬೇಕು. ಗೂಡಿನ ಮೇಲು ಭಾಗದಲ್ಲಿ ಸ್ವಲ್ಪ ಕಳೆ ತೆಗೆದ ಹುಲ್ಲನ್ನು ಹಾಕಬೇಕು.

ಈ ಪದ್ಧತಿಯ ಉಪಯೋಗಗಳು

1. ಮೊದಲ ಹಂತದ ಗೂಡು ಹಾಕುವುದರಿಂದ ಈರುಳ್ಳಿ ಸೊಪ್ಪು ಒಣಗುತ್ತದೆ ಮತ್ತು ಗಡ್ಡೆ ಕೆಂಪು ಬಣ್ಣಕ್ಕೆ ಬರುತ್ತದೆ ಮತ್ತು ಗಡ್ಡೆ ಗಾತ್ರ ದೊಡ್ಡದಾಗುತ್ತದೆ.
2. ಎರಡನೇ ಹಂತದಲ್ಲಿ ಈರುಳ್ಳಿ ಪೂರ್ಣ ಪ್ರಮಾಣದಲ್ಲಿ ಒಣಗುತ್ತದೆ. ಈ ಹಂತದ ಗೂಡುಗಳಲ್ಲಿ ಸುಮಾರು 2 ತಿಂಗಳಿಂದ 3 ತಿಂಗಳವರೆಗೆ ಈರುಳ್ಳಿಯನ್ನು ಶೇಖರಿಸಿ ಇಡಬಹುದು.
3. ಈ ಪದ್ಧತಿಯನ್ನು ಮಾಡುವಾಗ ಒಂದು ವೇಳೆ ಮಳೆ ಬಂದರೆ ಮತ್ತು ಸೊಪ್ಪು ಹಸಿ ಇದ್ದರೆ ಗೂಡನ್ನು ಹಾಕಬಾರದು ಏಕೆಂದರೆ ಸೊಪ್ಪು ಕೊಳೆತು ಈರುಳ್ಳಿ ಕೊಳೆಯುವ ಸಂಭವವಿರುತ್ತದೆ.
4. ಸಾಕಷ್ಟು ಪ್ರಮಾಣದ ಈರುಳ್ಳಿಯನ್ನು ಬೆಳೆಯುವುದರಿಂದ ನಮಗೆ ಗೋದಾಮಿನ ಸೌಕರ್ಯ ಇಲ್ಲದೆ ಶೇಖರಿಸಲು ಸಾಧ್ಯವಿಲ್ಲ. ಆದ್ದರಿಂದ ಹೊಲದಲ್ಲಿ ಈ ಪದ್ಧತಿಯನ್ನು ಅನುಸರಿಸುವುದರಿಂದ ಶೇಖರಿಸುವ ಸಮಸ್ಯೆಯನ್ನು ಬಗೆಹರಿಸಬಹುದು.
5. ಗೂಡು ಹಾಕಿ ಸಂಸ್ಕರಿಸಿದ ಈರುಳ್ಳಿ ರಫ್ತು ಮಾಡಲು ಮತ್ತು ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಪಡೆಯಲು ಸಹಕಾರಿಯಾಗಿರುತ್ತದೆ.

ಕೆರೆ-ಬಾವಿಗಳ ಹೂಳೆತ್ತುವ ಸಾಧನ

ಸ್ಥಳೀಯವಾಗಿ ದೊರಕುವ ಸಂಪನ್ಮೂಲಗಳನ್ನು ಬಳಸಿಕೊಂಡು ಕೆರೆ-ಬಾವಿಗಳ ಹೂಳನ್ನು ಮೇಲಕ್ಕೆತ್ತುವ ಉಪಾಯವೊಂದನ್ನು ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕು ಪೆರ್ಲಂಪಾಡಿ ಗ್ರಾಮದ ವಿತಡ್ಕ ಶಂಕರನಾರಾಯಣ ಭಟ್ಟರು ಕಾರ್ಯರೂಪಕ್ಕೆ ಅಳವಡಿಸಿದ್ದಾರೆ. ಮಾಧವಕಾರಂತ ವೇಣೂರರ ಸಲಹೆ ಮೇರೆಗೆ ತಯಾರಾದ ಈ ಸಾಧನ ನೀರು ಎತ್ತುವ ಏತವನ್ನು ಹೋಲುತ್ತದೆ. ಸಾಧಾರಣ ಉದ್ದದ ಒಂದು ಅಡಿಕೆ ಮರವನ್ನು ಕೆರೆ/ಬಾವಿಯ ಬದಿಯಲ್ಲಿ ನೆಡಬೇಕು. ಮತ್ತೊಂದು ಉದ್ದದ ಮರದ ಮಧ್ಯಕ್ಕೆ ದೊಡ್ಡ ಹಗ್ಗವೊಂದರ ಸುಮಾರು ಅರ್ಧ ಭಾಗವನ್ನು ಸುತ್ತಿ ಉಳಿದ ಹಗ್ಗವನ್ನು ಜಡೆಯಾಕಾರದಲ್ಲಿ ಹೆಣೆಯಬೇಕು. ನಂತರ ನೀವು ಮೊದಲೇ ಕೆರೆಯಬದಿಯಲ್ಲಿ ನೆಟ್ಟ ಅಡಿಕೆ ಮರಕ್ಕೆ ಏಣಿ ಇಟ್ಟು ರಾಟೆ ಮುಖಾಂತರ ಮೊದಲೇ ಹಗ್ಗ ಸುತ್ತಿದ ಅಡಿಕೆ ಮರವನ್ನು ಮೇಲೆ ಎತ್ತಿ ನೆಟ್ಟ ಮರದ ಮೇಲು ಬಾಗಕ್ಕೆ ಬಿಗಿಯಾಗಿ ಕಟ್ಟಬೇಕು. ಇದು ಈಗ ಒಂದು ತಕ್ಕಡಿ ರೂಪಕ್ಕೆ ಬಂದಂತೆ ಆಗುವುದು. ಮತ್ತೆ ತೂಗು ಬಿಟ್ಟ ಮರದ ಎರಡೂ ಬದಿಗೂ ಹಗ್ಗವನ್ನು ಕಟ್ಟಬೇಕು. ಮರದ ಒಂದು ತುದಿಯ ಹಗ್ಗದ ತುದಿಗೆ ಎರಡು ಕೊಕ್ಕೆಗಳನ್ನು ಕಟ್ಟಿ ಬುಟ್ಟಿಯನ್ನು (ಬಕೆಟ್) ಸಿಕ್ಕಿಸಿ, ಜೋತು ಬಿಟ್ಟು ಕೆರೆ/ ಬಾವಿಯೊಳಗೆ ಇಳಿಸಿ. ಈಗ ಒಬ್ಬಾತ ಕೆಸರು ಮಣ್ಣನ್ನು (ಹೂಳನ್ನು) ತುಂಬಿದರೆ ಮತ್ತಿಬ್ಬರು ತೂಗುಬಿದ್ದ ಮರದ ಮತ್ತೊಂದು ತುದಿಯ ಹಗ್ಗವನ್ನು ಜಗ್ಗಿಸಿ ಹೂಳನ್ನು ಮೇಲಕ್ಕೆತ್ತಬಹುದು. ಈ ವಿಧಾನ ಮಹತ್ವದ ಸಮಯ ಮತ್ತು ಮಾನವಶಕ್ತಿಗಳನ್ನು ಉಳಿಸಬಲ್ಲದು.

ರಾಗಿಯಲ್ಲಿ ಹೆಚ್ಚು ತೆಂಡೆ ಹೊಡೆಸುವುದು

ರಾಗಿ ನಾಟಿಯಾದ 20-30 ದಿನಗಳಲ್ಲಿ ಪ್ರತಿ ದಿನ ರಾಗಿ ಗುಣಿಗಳನ್ನು ತುಳಿಯುತ್ತಾ ಬಂದರೆ ಹೆಚ್ಚು ತೆಂಡೆ (tillers) ಹೊಡೆದು ಉತ್ತಮ ಇಳುವರಿ ಪಡೆಯಬಹುದು ಎನ್ನುತ್ತಾರೆ ಹಾಸನ ಜಿಲ್ಲೆ ಚೆನ್ನರಾಯ ಪಟ್ಟಣ ತಾಲ್ಲೂಕಿನ ಬಸವರಾಜು ಸಂತೇಶಿವರ. ಇವರು ತಮ್ಮ ಪ್ರಯತ್ನದಲ್ಲಿ ಒಂದು ಗುಣಿಗೆ 380 ತೆಂಡೆಗಳನ್ನು ಪಡೆದಿದ್ದಾರೆ.

(ಈ ಮೇಲಿನ ಎಲ್ಲಾ ಆನುಶೋಧನಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ)

ಗೋಟಡಿಕೆ ಸುಲಿಯುವ ಸರಳ ಉಪಕರಣ




ಉಡುಪಿ ಜಿಲ್ಲೆ ಬ್ರಹ್ಮಾವರದ ಬಳಿಯ ಹೇರೂರಿನ ಹೆಚ್. ಗಿರೀಶ ಅಡಿಗ ಅವರು (ಒಣಗಿದ) ಗೋಟಡಿಕೆ ಸುಲಿಯುವ ಸರಳ ಸಾಧನವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ತೆಂಗಿನ ಕಾಯಿ ಸುಲಿಯುವ ಸಲಕರಣೆಯ ತಂತ್ರವನ್ನೇ ಬಳಸಿ ಅಭಿವೃದ್ಧಿಪಡಿಸಲಾದ ಇದನ್ನು ಆರು ಮಿ.ಮೀ. ದಪ್ಪದ ಕಬ್ಬಿಣದ ಸರಳಿನಿಂದ ರಚಿಸಲಾಗಿದ್ದು ಎರಡು ಇಂಚು ಉದ್ದ ಮತ್ತು 160 ಗ್ರಾಂ ತೂಕವಿದೆ.

ಒಂದು ಕೈಯಲ್ಲಿ ಸಲಕರಣೆಯನ್ನು ಹಿಡಿದು ಇನ್ನೊಂದು ಕೈಯಿಂದ ಒಣಗಿದ ಅಡಿಕೆಯ ಜುಟ್ಟಿನ ಭಾಗವನ್ನು ಅಡ್ಡವಾಗಿ ಸಲಕರಣೆಗೆ ಚುಚ್ಚಿ ಸಲಕರಣೆಗೆ ಕನಿಷ್ಠ ಒತ್ತಡ ಕೊಟ್ಟಾಗ ಅಡಿಕೆ ಸುಲಭದಲ್ಲಿ ಹೊರಬರುತ್ತದೆ. ಇದರಿಂದ ನಿಮಿಷಕ್ಕೆ 10 ರಿಂದ 15 ಅಡಿಕೆಗಳನ್ನು ಸುಲಭದಲ್ಲಿ ಬಿಡಿಸಬಹುದು. ಈ ಸಲಕರಣೆ ಸದ್ಯಕ್ಕೆ ಮಾರಾಟಕ್ಕೆ ಲಭ್ಯವಿಲ್ಲ. ಆಸಕ್ತರು ಕಬ್ಬಿಣದ ವರ್ಕ್‌ಶಾಪ್‌ನಲ್ಲಿ ಮಾಡಿಸಿಕೊಳ್ಳಬಹುದು.

ಸೂರ್ಯ ಶಾಖದಿಂದ ನೀರು ಕಾಯಿಸುವ ಸರಳ ತಂತ್ರ

ದಕ್ಷಿಣ ಕನ್ನಡ ಜಿಲ್ಲೆ ಪುಣಚದ ಶ್ಯಾಮಶಾಸ್ತ್ರಿಯವರ ಮನೆ ಬಳಕೆಯ ನೀರು ಇವರ ಮನೆಯಿಂದ ಸುಮಾರು 100 ಮೀಟರ್ ದೂರದ ಚಿಕ್ಕಬೆಟ್ಟದ ಮೇಲೆ ಇರುವ ಟ್ಯಾಂಕಿನಿಂದ ಬರುತ್ತದೆ. ಇದಕ್ಕಾಗಿ ಇವರು ಕಪ್ಪು ಅಲ್ಕತೀನ್ ಪೈಪನ್ನು ಬಳಸಿ ಹೂಳುವ ಬದಲು ತಾತ್ಕಾಲಿಕವಾಗಿ ನೆಲದ ಮೇಲೆ ಬಿಟ್ಟಿದ್ದರು. ಇದರಿಂದಾಗಿ ಆಶ್ಚರ್ಯಕರ ರೀತಿಯಲ್ಲಿ ಇವರ ಮನೆಗೆ ಬಿಸಿ ನೀರು ಬರಲು ಆರಂಭವಾಯಿತು. ಆ ಬೇಸಿಗೆಯಲ್ಲಿ ಬಿಸಿನೀರಿನ ಅವಶ್ಯಕತೆ ಇಲ್ಲದಿದ್ದರೂ



ಹೂಳದೆ ಬಿಟ್ಟ ಕಪ್ಪು ಪೈಪುಗಳು ಇವರ ಹೊಸ ಆವಿಷ್ಕಾರಕ್ಕೆ ನಾಂದಿಯಾದವು. ಈಗ ಇವರು ಆ ಪೈಪುಗಳನ್ನು ಹೂತು, ಹನಿ ನೀರಾವರಿಗೆ ಬಳಸುವ 16 ಮಿ.ಮೀ. ಗಾತ್ರದ LLDDE ಪೈಪುಗಳನ್ನು ಸುರುಳಿಯಾಕಾರಕ್ಕೆ ಸುತ್ತಿ ಮನೆಯ ಮೇಲೆ ಹರಡಿ ಆ ಪೈಪಿನ ಒಂದು ತುದಿಯನ್ನು ನೀರಿನ ಮೂಲಕ್ಕೂ ಮತ್ತೊಂದು ತುದಿಯನ್ನು ಸ್ನಾನದ ಮನೆಯ ನಲ್ಲಿಗೂ ಸಿಕ್ಕಿಸಿದರು. ಫಲಿತಾಂಶ ಅದ್ಭುತವಾಗಿತ್ತು, ನೀರು ನಿಜವಾಗಿಯೂ ಸುಡುತ್ತಿತ್ತು.

ಇವರ ಅನುಭವದಂತೆ 100 ಮೀಟರ್ ಉದ್ದದ, 16 ಮಿ.ಮೀ. ಗಾತ್ರದ ಪೈಪು ಪ್ರತಿ ಅರ್ಧ ಗಂಟೆಗೆ ಸುಮಾರು 15 ರಿಂದ 20 ಲೀಟರ್ ಬಿಸಿ ನೀರನ್ನು ಕೊಡಬಲ್ಲದು (ಬೆಳಿಗ್ಗೆ 11.00 ರಿಂದ ಸಂಜೆ 3.00 ರವರೆಗೆ). ಈ ನೀರನ್ನು ಸಂಗ್ರಹಿಸಿ ರಾತ್ರಿ ಬಳಸಬಹುದು. ಈಗ ಇವರು ಪೈಪಿನ ಸುರುಳಿಯನ್ನು ತಮ್ಮ ಮನೆಯ ತಾರಸಿಯ ಮೇಲೆ ಹರಡಿದ್ದು ಇನ್ನೂ ಹೆಚ್ಚು ಬಿಸಿ ನೀರನ್ನು ಪಡೆಯುತ್ತಿದ್ದಾರೆ. ಇದು ಉರುವಲುಗಳನ್ನು ಉಳಿಸಬಲ್ಲ ಪರಿಸರ ಸ್ನೇಹಿ ಮತ್ತು ಕನಿಷ್ಠ ವೆಚ್ಚದ ವಿಧಾನವಾಗಿದ್ದು ಕೇವಲ 500 ರೂಪಾಯಿಗಳ ಬಂಡವಾಳವನ್ನು ಬೇಡುತ್ತದೆ.

ಶೀಘ್ರ ನೀರು ಕಾಯಿಸುವ ಸಾಧನ



ಕೇವಲ ಅರ್ಧ ಕೆ.ಜಿ. ಕಟ್ಟಿಗೆ ಚೂರು ಅಥವಾ ನಾಲ್ಕು ತೆಂಗಿನ ಚಿಪ್ಪುಗಳು ಅಥವಾ ಹಳೆ ಕಾಗದದ ಚೂರುಗಳಿಂದ ಹತ್ತೇ ನಿಮಿಷಗಳಲ್ಲಿ 65 ಲೀಟರ್ ಬಿಸಿ ನೀರು ಪಡೆಯಬಹುದೇ? ವಿದ್ಯುತ್ ಅಥವಾ ಗ್ಯಾಸ್ ಬಳಕೆಯಿಲ್ಲದೆ ನೀರನ್ನು ಶೀಘ್ರ ಕಾಯಿಸಬಹುದೆ? ಹೌದು. ಇದು ಸಾಧ್ಯವಾಗಲೆಂದೇ ಚಿಕ್ಕಮಗಳೂರು ಜಿಲ್ಲೆ ಕುದುರೆಮುಖದ ಶ್ರೀ. ಬಿ.ಎನ್. ಸ್ವಾಮಿಯವರು "ಸೌದೆ ಗೀಜರ್" ಒಂದನ್ನು ಅಭಿವೃದ್ಧಿಪಡಿಸಿದ್ದಾರೆ. ಕಬ್ಬಿಣದ ಪೈಪು, ಕಬ್ಬಿಣದ ಶೀಟು (ಹಾಳೆ), ರೂಟೆಕ್ಸ್ ಕೋಟಿಂಗ್ ಮಿಶ್ರಣ ಮುಂತಾದವುಗಳನ್ನು ಬಳಸಿ ತಯಾರಿಸುವ ಈ ಸಾಧನವನ್ನು ಮನೆಯ ಯಾವ ಭಾಗದಲ್ಲಾದರೂ ಅಳವಡಿಸಬಹುದು. ಇದು ಒಳಭಾಗದಲ್ಲಿ ಎರಡು ಕಂಟೈನರ್‌ಗಳನ್ನು ಹೊಂದಿದ್ದು ಮಧ್ಯಭಾಗದಲ್ಲಿ ಇನ್ಸುಲೇಷನ್ ಅಳವಡಿಕೆಯಿಂದಾಗಿ ಬಿಸಿ ಹಿಡಿದಿಟ್ಟಿರುತ್ತದೆ. ಈ ಕಂಟೇನರ್‌ಗಳನ್ನು ಉತ್ತಮ ಗುಣಮಟ್ಟದ ದಪ್ಪವಾದ ಶೀಟಿನಿಂದ ಮಾಡಲಾಗಿದ್ದು ಒಳಭಾಗದಲ್ಲಿ ಕೋಟಿಂಗ್ ಮಾಡಿರುವುದರಿಂದ ತುಕ್ಕು ಹಿಡಿಯುವುದಿಲ್ಲ. ಮನೆಯೊಳಗೆ ಹೊಗೆ ಬರದಂತೆ ಹೊಗೆ ಕೊಳವೆ, ಚಿಕ್ಕಬಾಗಿಲು ಮತ್ತು ಬೂದಿ ಸಂಗ್ರಹಣ ತಟ್ಟೆಗಳನ್ನು ಅಳವಡಿಸಲಾಗಿದೆ. ಇದರಲ್ಲಿ ಗ್ಯಾಸ್ ಗೀಜರ್‌ನಂತೆ ಅಪಾಯದ ಸಂಭವವಿಲ್ಲ. ಗ್ಯಾಸಿಗಾಗಿ ಕಾಯುವ ವ್ಯಥೆಯಿಲ್ಲ. ವಿದ್ಯುತ್ ಗೀಜರ್‌ನಂತೆ ಕರೆಂಟನ್ನು ಅವಲಂಬಿಸುವಂತಿಲ್ಲ. ಇದು ದೀರ್ಘಕಾಲ ಬಾಳಿಕೆ ಬರಬಲ್ಲ ಸುರಕ್ಷಿತ ಸಾಧನವಾಗಿದ್ದು ನಾಲ್ಕು ಸಾವಿರ ರೂಪಾಯಿಗಳ ಬೆಲೆಗೆ ಮಾರುಕಟ್ಟೆಯಲ್ಲಿ ಲಭ್ಯವಿದೆ. ಆಸಕ್ತರು *ಬೆಸ್ಟ್ ಎಲೆಕ್ಟ್ರಿಕಲ್ಸ್, ಸೇಲ್ಸ್ ಅಂಡ್ ಸರ್ವೀಸ್, ನಂ. 4, ತುಂಗಾ ಮಾರ್ಕೆಟ್ (ಮನೋಲಿಸಾ ಸ್ಟುಡಿಯೋ ಹತ್ತಿರ), ಪ್ರಥಮ ಹಂತ, ಕುದುರೆ ಮುಖ - 577 142.* ಇವರನ್ನು ಸಂಪರ್ಕಿಸಬಹುದು.

(ಈ ಮೇಲಿನ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ).

ಲೇಖನ: ಮು.ಲ. ಕೆಂಪೇಗೌಡ ನಾಗಮಂಗಲ


ಬಿಎಸ್ಸಿ ಪದವೀಧರರಾದ ಸಾಗರದ ಅನುಭವಿ ಕೃಷಿಕ, ಈ ಸಾಲಿನ 'ಕೃಷಿ ಪಂಡಿತ' ಪ್ರಶಸ್ತಿಪುರಸ್ಕೃತರಾದ ಶ್ರೀ ಕೆ.ವಿ. ಲಕ್ಷ್ಮಿನಾರಾಯಣ ಹೆಗಡೆಯವರು ಎಲೆಮರೆಯ ಕಾಯಿಯಂತೆಯೇ ಇದ್ದು ಸಾದಿಸಿದ್ದು ಹಲವು ಬಗೆ. "ಖುಷಿಗಾಗಿ ಕೃಷಿ" ಎಂದು ನಂಬಿರುವ ಇವರು ಎಲ್ಲಿಯವರೆಗೆ ಕೃಷಿಯನ್ನು ಒಂದು ಉದ್ಯಮವಾಗಿ ಕಾಣುವುದಿಲ್ಲವೊ ಅಲ್ಲಿಯವರೆಗೆ ಕೃಷಿಯಿಂದ ಉದ್ದಾರವಾಗುವುದು ಅಸಾಧ್ಯ ಎನ್ನುತ್ತಾರೆ. ಸೋಮಾರಿತನ ಬಿಡದೆ ರೈತರ, ಜನರ ಪ್ರಗತಿ ಸಾಧ್ಯವಿಲ್ಲ ಎನ್ನುವ ಹೆಗಡೆಯವರು "ಕೃಷಿಯಲ್ಲಿ ಕೈಗಾರಿಕೆಯ ಲಕ್ಷಣ, ಕೈಗಾರಿಕೆಯಲ್ಲಿ ಕೃಷಿಯ ನೆಮ್ಮದಿ" ಇರಬೇಕು ಎಂಬ ತಮ್ಮ ಧೋರಣೆಯನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಈ ದೃಷ್ಟಿಯಿಂದಲೇ ಕೃಷಿಯನ್ನು ಲಾಭದಾಯಕವಾಗಿಸಲು ಹಲವಾರು ವಿನೂತನ ಸಂಶೋಧನೆಗಳನ್ನು ಮಾಡಿರುತ್ತಾರೆ.

ಸಮೃದ್ಧ ವೈವಿಧ್ಯಮಯ ಕೃಷಿ ತೋಟ

ಮೂಲತಃ ಉದ್ಯಮಿಯಾಗಲಿಚ್ಚಿಸಿದ ಇವರು ತಮ್ಮ ಕೆಲಸದವರಿಗೆ ಒಂದು ಅನ್ನದ ನೆಲೆಯಾಗಲೆಂದು ಸುಮಾರು ಐದು ಎಕರೆ ಜಮೀನನ್ನು 1992ರಲ್ಲಿ ಕೊಂಡುಕೊಂಡರು. ಕ್ರಮೇಣ ಇದು ಇವರ ತಲೆಗೆ ಗಂಟುಬಿದ್ದು ಕೃಷಿಯಲ್ಲಿ ಒಲವು ಮೂಡಿ ಇವರ ಹಲವು ಸಂಶೋಧನೆಗಳಿಗೆ ಕಾರ್ಯಾಗಾರವಾಯಿತು. ಈ ಕಾರ್ಯಾಗಾರದಲ್ಲಿ ಅರಳಿದ ಸಂಶೋಧನೆಗಳೆಂಬ ಪುಷ್ಪಗಳು ಹಲವಿರುವಂತೆ ಇವರ ತೋಟ ಅಡಿಕೆ, ತೆಂಗು, ಬಾಳೆ, ಅನಾನಸ್, ಕಬ್ಬು, ಅರಿಶಿಣ, ಪಪ್ಪಾಯಿ, ಭತ್ತ, ಗೇರು, ದಾಳಿಂಬೆ, ಮಾವು, ಗುಲಾಬಿ, ದಾಸವಾಳ, ಆಂಥೋರಿಯಮ್ ಮುಂತಾದ ಹೂಗಿಡಗಳು, ತರಕಾರಿಗಳು, ದ್ವಿದಳ ದಾನ್ಯಗಳು ಮುಂತಾದ ಧಾನ್ಯ-ಫಲ-ಪುಷ್ಪಗಳಿಂದ ಸಮೃದ್ಧವಾಗಿದೆ. ಜೊತೆಗೆ ಇವರ ತೋಟದಲ್ಲಿ ವಿವಿಧ ಬಗೆಯ ಸಸ್ಯಗಳ, ವಿವಿಧ ಪ್ರಬೇಧಗಳ ದೇಶ-ವಿದೇಶಗಳ ಸಂಗ್ರಹವಿದೆ.

ನೀರಿನೊಂದಿಗೆ ಸಾವಯವ ಗೊಬ್ಬರ


ಕೃಷಿ ಲಾಭದಾಯಕವಾಗಬೇಕೆಂದರೆ ಅದಕ್ಕೆ ತಗಲುವ ಶ್ರಮ ಮತ್ತು ಖರ್ಚನ್ನು ಕಡಿಮೆ ಮಾಡಬೇಕು. ಈ ಖರ್ಚನ್ನು ಕಡಿಮೆ ಮಾಡುವ ವಿಧಾನಗಳಲ್ಲಿ ಗೊಬ್ಬರವನ್ನು ನೀರಿನೊಂದಿಗೆ (ರಸಾವರಿ ಪದ್ಧತಿ) ಕೊಡುವುದು ಒಂದು ಮಹತ್ವದ ಉಪಾಯ ಎಂದು ಕಂಡುಕೊಂಡ ಶ್ರೀ ಹೆಗಡೆಯವರು ಅದಕ್ಕಾಗಿ "ಸಾವಯವ ಗೋಬರ್ ಡೈಜಸ್ಟರ್"ನ್ನು ರೂಪಿಸಿ ಬಳಸುತ್ತಿದ್ದಾರೆ. ಇವರ ಸಂಶೋಧನೆಗಳಲ್ಲಿ ಕಿರೀಟ ಪ್ರಾಯವಾಗಿ ಕಾಣುವ ಇದರಿಂದ ಶೇಕಡ 90ರಷ್ಟು ಕೂಲಿ ಶ್ರಮ ಉಳಿತಾಯವಾಗುತ್ತಿದೆ. ಸುಮಾರು ಐದರಿಂದ ಆರು ಲೋಡು ಸಾವಯವ ಮೂಲವಸ್ತುವನ್ನು ಹಿಡಿಯಬಲ್ಲ ಒಂದು ಟ್ಯಾಂಕಿನ ತಳಬಾಗದ ಮಧ್ಯದಲ್ಲಿ ಮುಕ್ಕಾಲು ಅಡಿ ಆಳ, ಅಗಲದ ಒಂದು ಕಾಲುವೆ ಮಾಡಿಕೊಂಡು ಅದರ ಮಧ್ಯೆ 2 ಇಂಚಿನ ಪಿ.ವಿ.ಸಿ ಪೈಪನ್ನು ಮೇಲು ಬದಿಯಲ್ಲಿ 1 ಅಡಿಗೆ 16 ತೂತಿನಂತೆ 6 ಮಿ.ಮೀ. ಅಳತೆಯ ತೂತುಗಳನ್ನು ಮಾಡಿ ಜೋಡಿಸಿದ್ದಾರೆ. ಈ ಪೈಪಿನ ಒಂದು ತುದಿಗೆ ಮುಚ್ಚಳವೂ ಮತ್ತೊಂದು ತುದಿಯಲ್ಲಿ 'ಟಿ' ಹಾಕಿ ಒಂದು ಬದಿಗೆ ಪಂಪ್‌ನ ನೀರಿನ ಸಂಪರ್ಕ ಮತ್ತೊಂದು ಬದಿಗೆ (ಮೇಲಿನಿಂದಲೇ ನಿಯಂತ್ರಿಸಬಲ್ಲ) ವಾಲ್ವ್ ಅಳವಡಿಸಿದ್ದಾರೆ. ಟ್ಯಾಂಕಿಯ ಒಂದು ಬದಿಯಲ್ಲಿ ಟ್ಯಾಂಕಿಯ ಆಳಕ್ಕಿಂತ 2 ಅಡಿ ಹೆಚ್ಚು ಆಳವಿರುವಂತೆ ಮತ್ತೊಂದು ಸಣ್ಣ ಟ್ಯಾಂಕ್ ಮಾಡಿಕೊಂಡಿದ್ದಾರೆ. ಒಟ್ಟಾರೆ ಟ್ಯಾಂಕಿಯನ್ನು ಸ್ವಲ್ಪ ಇಳಿಜಾರಿರುವಂತೆ ಮಾಡಿದ್ದಾರೆ. ಟ್ಯಾಂಕಿಯ ಮಧ್ಯದಲ್ಲಿ ಮಾಡಿದ ಕಾಲುವೆಯ ನಡುವಿನಲ್ಲಿ ಅಳವಡಿಸಲಾದ ತೂತು ಮಾಡಿರುವ ಪಿ.ವಿ.ಸಿ. ಪೈಪಿಗೆ 20 ಮೈಕ್ರಾನ್ ಅಳತೆಯ ತೂತುಗಳುಳ್ಳ ನೈಲಾನ್ ನೆಟ್ ಸುತ್ತಿ ಭದ್ರವಾಗಿ ಕಟ್ಟಿ ಅದರ ಮೇಲೆ ಜಲ್ಲಿ [ಬೇಬಿ ಜಲ್ಲಿ-ಮುಕ್ಕಾಲು ಇಂಚು ದಪ್ಪ] ಯನ್ನು ಹಾಕಿ ಮುಚ್ಚಿದ್ದಾರೆ. ಹೀಗೆ ತಯಾರಾದ ಟ್ಯಾಂಕಿಗೆ ತೋಟದ ನಿರುಪಯುಕ್ತ ತ್ಯಾಜ್ಯಗಳು, ಕಳೆಗಿಡ, ಕೊಟ್ಟಿಗೆ ಗೊಬ್ಬರ, ಕೋಳಿಗೊಬ್ಬರ, ಗೋಬರ್ ಸ್ಲರಿ, ಬೇವಿನ ಹಿಂಡಿ, ಎರೆಗೊಬ್ಬರ, ಗ್ಲಿರಿಸಿಡಿಯಾ, ಅಜೋಲಾಗಳನ್ನು ನೇರವಾಗಿ ತುಂಬಿ ಒಂದು ವಾರಗಳ ಕಾಲ ಕೊಳೆಸಲಾಗುತ್ತದೆ. ಒಂದು ವೇಳೆ ಗೋಬರ್ ಗ್ಯಾಸ್ ಸ್ಲರಿ ದೊರಕದಿದ್ದರೆ ಎರಡು ದಿನಕ್ಕೊಮ್ಮೆ ಪೈಪಿನಲ್ಲಿ ನೀರು ಚಿಮುಕಿಸಬೇಕು. ಹೀಗೆ ಮಾಡಿದಾಗ ತ್ಯಾಜ್ಯ ಪದಾರ್ಥಗಳು ಶೀಘ್ರವಾಗಿ ವಿಭಜನೆ ಹೊಂದಿ ಕೊಳೆಯುತ್ತಾ ಪೋಷಕಾಂಶಗಳಿಂದ ಕೂಡಿದ ರಸವು ಜಲ್ಲಿ ಹಾಕಿರುವ ಸ್ಥಳದ ಮೂಲಕ ಹಾಗೂ ನೈಲಾನ್ ಮೆಶ್ ಮೂಲಕ ಸಂಪೂರ್ಣವಾಗಿ ಸೋಸಲ್ಪಟ್ಟು ಪೈಪಿನ ಮೂಲಕ ಹರಿದು ಮತ್ತೊಂದೆಡೆ ಮಾಡಲಾದ ಸಣ್ಣ ಟ್ಯಾಂಕಿನಲ್ಲಿ ಬಂದು ಸಂಗ್ರಹವಾಗಿರುತ್ತದೆ. ಇದು ಸಂಪೂರ್ಣವಾಗಿ ಸೋಸಲ್ಪಟ್ಟು ಡಿಕಾಕ್ಷನ್ ತರಹದಲ್ಲಿರುತ್ತದೆ. ಇದನ್ನು ಪಂಪಿನ ಮುಖಾಂತರ ಮುಖ್ಯ ನೀರಾವರಿ ವ್ಯವಸ್ಥೆಗೆ ಜೋಡಿಸಿದಾಗ ದುರ್ಬಲ ದ್ರಾವಣವಾಗಿ ಸಿಂಪಡಣೆಗೊಳ್ಳುತ್ತದೆ. ಹಲವು ಬಾರಿ ಡೈಜಸ್ಟರ್‌ಗೆ ನೀರು ತುಂಬಿಸಿ ಉಪಯೋಗಿಸಲ್ಪಟ್ಟ ಅನಂತರ ಚರಟವನ್ನು ಎರೆಹುಳುಗಳಿಗೆ ಆಹಾರವಾಗಿ ಪುನರ್ಬಳಕೆ ಮಾಡಿ ಎರೆಗೊಬ್ಬರ ತಯಾರಿಸಬಹುದು. ಈ ರಸಾವರಿ ಪದ್ಧತಿಯಿಂದ ಗಿಡಗಳ ಬೇರಿನ ಸಮೂಹಕ್ಕೆ ನೇರವಾಗಿ ಗೊಬ್ಬರ ಪೂರೈಕೆಯಾಗುತ್ತದೆ. ಎಲೆಗಳ ಮೂಲಕವೂ ಗಿಡಗಳಿಗೆ ಪೋಷಕಾಂಶಗಳು ಉಣಿಸಲ್ಪಡುತ್ತವೆ. ತೋಟದಲ್ಲಿ ಹರಡಿದ ಸಾವಯವ ಪದಾರ್ಥಗಳು ಬೇಗ ಕೊಳೆಯುತ್ತವೆ. ಕಳೆಗಳ ನಿರ್ವಹಣೆ ಮತ್ತು ನಿಯಂತ್ರಣ ನಡೆಯುತ್ತದೆ. ನಿರಂತರವಾಗಿ ಗಿಡಗಳಿಗೆ ಪೋಷಕಾಂಶಗಳು ದೊರೆಯುತ್ತಿರುತ್ತವೆ. ಸೂಕ್ಷ್ಮಾಣು ಜೀವಿಗಳ ಕ್ರಿಯೆಯನ್ನು ಚುರುಕುಗೊಳಿಸಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಸಮೃದ್ಧಗೊಳಿಸುತ್ತದೆ. ಉಳುಮೆ ಮಾಡುವ ಅಗತ್ಯವಿಲ್ಲ. ಕಳೆ ತೆಗೆಯುವ, ಭೂಮಿ ಅಗೆಯುವ, ಗೊಬ್ಬರ ಸಾಗಿಸುವ ಮುಂತಾದ ಕೆಲಸಗಳಲ್ಲಿ ಸಂಪೂರ್ಣವಾಗಿ ಮಾನವನ ಶ್ರಮ ಉಳಿತಾಯವಾಗುತ್ತದೆ. ಪೋಷಕಾಂಶಗಳ ಕೊರತೆ ಕಂಡು ಬಂದಲ್ಲಿ ಇದರ ಜೊತೆಯಲ್ಲಿ ರಾಸಾಯನಿಕ ಗೊಬ್ಬರದ ದುರ್ಬಲ ದ್ರಾವಣವನ್ನು ಮಾಡಿ ಮಣ್ಣಿನ ಆರೋಗ್ಯ ಹಾಳಾಗದಂತೆ ಈ 'ರಸಾವರಿ' ವ್ಯವಸ್ಥೆಯಲ್ಲಿ ವಿತರಿಸುತ್ತಾರೆ. ರೋಗ ಮತ್ತು ಕೀಟನಾಶಕವನ್ನು ನೀರಿನೊಂದಿಗೆ ಬೆರೆಸಿ ಸಿಂಪಡಿಸಬಹುದು. ಅಂದ ಹಾಗೆ ನೀರು ಸಂಗ್ರಹಕ್ಕಾಗಿ ಮಾಡಿದ ಕೊಳವೇ ಕಲಾತ್ಮಕವಾಗಿ ಈಜು ಕೊಳವಾಗಿದೆ. ಚಿಮ್ಮು ಕಾರಂಜಿಯೂ ರಂಜಿಸಲು ಸಿದ್ಧವಾಗಿದೆ. ಇವರ ವಿಳಾಸ: *ಕೆ.ವಿ. ಲಕ್ಷ್ಮಿನಾರಾಯಣ ಹೆಗಡೆ, ಹೆಗಡೆ ಫಾರಂ, ಭೀಮನ ಕೋಣೆ ರಸ್ತೆ, ಸಾಗರ-577 401, ಶಿವಮೊಗ್ಗ ಜಿಲ್ಲೆ.*



(ಇವರ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನ ಪ್ರತಿಷ್ಠಾನದ ಮೂರನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ)

ಸಂಗ್ರಹ ಲೇಖನ: ಮು.ಲ. ಕೆಂಪೇಗೌಡ ನಾಗಮಂಗಲ

ಮಲೆನಾಡ ಸೆರಗಿನಲ್ಲೊಬ್ಬ ಅಪ್ಪಟ ನಾಟಿ ವೈದ್ಯ ಈಶ್ವರ ನಾಯಕ್



ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕು ಕೋಣನಕೆರೆ ಗ್ರಾಮ ಮುಡಬದ ಶ್ರೀ ಈಶ್ವರ ನಾಯಕರು ಓದಿದ್ದು ಕೇವಲ 8ನೇ ತರಗತಿಯವರೆಗಾದರೂ ತಮ್ಮ ವೈದ್ಯ ಪಾಂಡಿತ್ಯ ಮತ್ತು ಕೈಗುಣಗಳಿಂದಾಗಿ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಖ್ಯಾತಿಗಳಿಸಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಸ್ವತಹ ನಾಟಿ ಔಷಧಿಗಳನ್ನು ಸಿದ್ಧಪಡಿಸಿ ಅದರ ಮೂಲಕ ಮೂಳೆ ಮುರಿತ, ಸೊಂಟ ನೋವು, ನರಗಳ ದೌರ್ಬಲ್ಯ, ಗ್ಯಾಸ್ಟ್ರಿಕ್, ಅಸ್ತಮ, ದಮ್ಮು, ಬಿಳಿಸೆರಗು ಮುಂತಾದ ಕಾಯಿಲೆಗಳನ್ನು ಕಡಿಮೆ ಖರ್ಚಿನಲ್ಲಿ ಗುಣಪಡಿಸುತ್ತಿದ್ದಾರೆ.

ಐವತ್ತು ವರ್ಷ ವಯಸ್ಸಿನ ಈಶ್ವರನಾಯಕರು ಕಳೆದ ಮೂವತ್ತು ವರ್ಷಗಳಿಂದ ಸುಮಾರು ಹತ್ತಾರು ಸಾವಿರ ರೋಗಿಗಳಿಗೆ ಔಷಧಿ ನೀಡಿ ಗುಣಪಡಿಸಿದ್ದಾರೆ. 1970ನೇ ಇಸವಿಯಿಂದ ತಮ್ಮ ಮನೆಯ ಸುತ್ತಮುತ್ತಲಿನ ಕಾಡಿನಲ್ಲಿ ದೊರೆಯುತ್ತಿದ್ದ ಗಿಡಮೂಲಿಕೆಗಳನ್ನು ತಂದು ಸ್ವಂತ ನಾಟಿ ಔಷಧಿಗಳನ್ನು ತಯಾರಿಸಲು ಪ್ರಾರಂಭಿಸಿದ ಇವರು ಪ್ರಸ್ತುತ ಎಕ್ಕದ ಎಲೆ (*Calotropis gigantea*, R. Br.), ಹುಲಿ ಎಲೆ, ಲಂಟಾನ ಎಲೆ (*Lantana camara*, L.), ನಾಚಿಕೆ ಮುಳ್ಳು (*Mimosa pudica*, L), ತೊಂಡೆ ಸೊಪ್ಪಿನ ಬಳ್ಳಿ (*Coccinia indica*, L), ಬಿಲ್ವ ಪತ್ರೆ (*Aegle marmelos*, Corr.), ನಿತ್ಯ ಪುಷ್ಪ ಮುಂತಾದ ಗಿಡ ಮೂಲಿಕೆಗಳನ್ನು ಬಳಸುತ್ತಾರೆ. ಈ ಗಿಡಮೂಲಿಕೆಗಳನ್ನು ಸಂಗ್ರಹಿಸಿ, ಸರಿಯಾಗಿ ಜಜ್ಜಿ, ಅಳತೆಗೆ ತಕ್ಕಂತೆ ಕೊಬ್ಬರಿ ಎಣ್ಣೆಯಲ್ಲಿ ಮಿಶ್ರ ಮಾಡಿ, ಸೂಕ್ತ ರೀತಿಯಲ್ಲಿ ಬೇಯಿಸಿ ನೋವಿನ ಎಣ್ಣೆಯನ್ನು ತಯಾರು ಮಾಡುವ ಜೊತೆಗೆ ಹೊಟ್ಟೆಗೆ ತೆಗೆದುಕೊಳ್ಳಲು ಗುಳಿಗೆಗಳನ್ನು ಸಹ ಮಾಡುತ್ತಾರೆ. ಇಂಗ್ಲೀಷ್ ಔಷಧಿಯಿಂದ ಗುಣಹೊಂದದ ಗಂಭೀರ ಸ್ವರೂಪದ ಕಾಯಿಲೆಗಳನ್ನು ಗುಣಪಡಿಸಿದ ಖ್ಯಾತಿ ಇರುವ ಇವರು ರೋಗಿಗಳು ಯಾವುದೇ ಗಳಿಗೆಯಲ್ಲಿ ಬಂದರೂ ಸೇವೆ ಮಾಡುತ್ತಾರೆ. ಅಪಘಾತಗಳಿಂದ ಬಿಟ್ಟುಹೋದ ನರಗಳು, ಮೂಳೆ ಮುರಿತಗಳನ್ನು ಬ್ಯಾಂಡೇಜ್ ಹಾಕಿ ನಾಟಿ ಔಷಧಿ ಹಚ್ಚಿ ಅತಿ ಜಾಗ್ರತೆಯಿಂದ ಜೋಡಣೆ ಮಾಡುತ್ತಾರೆ.

ಈಗ ಇವರ ಸೇವೆಯ ಕೈಗಳ ಜೊತೆಗೆ ಇವರ ಮಕ್ಕಳಾದ ರಾಘವೇಂದ್ರ ಮತ್ತು ರವೀಂದ್ರ ಅವರುಗಳು ಸೇರಿಕೊಂಡಿದ್ದು ಇವರ ಸೇವೆ ಸುಲಭವಾಗುವುದರ ಜೊತೆಗೆ ವಿಸ್ತರಿಸಿದೆ. ಬಡ ರೋಗಿಗಳ ಅನುಕೂಲಕ್ಕಾಗಿ ಪ್ರತಿ ತಿಂಗಳ ಕೊನೆಯ ಬುಧವಾರ "ಉಚಿತ ನಾಟಿ ವೈದ್ಯ ಚಿಕಿತ್ಸಾ ಕಾರ್ಯಕ್ರಮ"ವನ್ನು ಕಳೆದ ಎರಡು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ.

ಇವರ ಔಷಧಿಯಿಂದ ಗುಣಮುಖರಾಗಿ ಸಂತುಷ್ಟರಾದ ಹಲವಾರು ರೋಗಿಗಳ ಪಟ್ಟಿಯಲ್ಲಿ ವೈದ್ಯಾಧಿಕಾರಿಗಳು, ನ್ಯಾಯಾದೀಶರು, ಸರ್ಕಾರದ ಉನ್ನತ ಅಧಿಕಾರಿಗಳು ಇದ್ದಾರೆ. ಇವರ ಸೇವೆಯನ್ನು ತಿಳಿದ ಧರ್ಮಸ್ಥಳದ ಧರ್ಮದರ್ಶಿ ಶ್ರೀ ವೀರೇಂದ್ರ ಹೆಗ್ಗಡೆಯವರು ಶುಭಾಶಯ ಕೋರಿ ಹರಸಿದ್ದಾರೆ. ಇವರಿಗೆ ಇದುವರೆಗೆ ಹಲವಾರು ಸ್ಥಳೀಯ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಅವುಗಳಲ್ಲಿ ಪ್ರಮುಖವಾಗಿ 2002ರ ಪಾರಂಪರಿಕ ವೈದ್ಯರ ರಾಜ್ಯ ಮಟ್ಟದ ಸಮಾವೇಶದ ಸನ್ಮಾನ, ನರಸಿಂಹರಾಜಪುರದ ಗಣರಾಜ್ಯೋತ್ಸವ ಸಮಿತಿಯಿಂದ ಸನ್ಮಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನಗಳನ್ನು ಹೆಸರಿಸಬಹುದು. ಇವರ ಸೇವೆಯನ್ನು ಗುರುತಿಸಿದ ಸಂಘ ಸಂಸ್ಥೆಗಳು ಮತ್ತು ಜಿಲ್ಲಾಡಳಿತ ರಾಜ್ಯ ಪ್ರಶಸ್ತಿಗೆ ಶಿಫಾರಸ್ಸು ಮಾಡಿವೆ.

ಜನರ ಅನುಕೂಲಕ್ಕಾಗಿ ಒಂದು ಉತ್ತಮ ನಾಟಿ ಔಷಧಾಲಯ ಮತ್ತು ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂಬ ಅದಮ್ಯ ಆಸೆಯಿರುವ ಇವರು ಸರ್ಕಾರ ಅಥವಾ ಸಂಘ ಸಂಸ್ಥೆಗಳು ಸುಮಾರು ನಾಲ್ಕು ಎಕರೆ ಜಮೀನನ್ನು ಕೊಡಮಾಡಿದರೆ ಆ ಜಮೀನಿನಲ್ಲಿ ವಿವಿಧ ಗಿಡಮೂಲಿಕೆಗಳನ್ನು ಸಂಗ್ರಹಿಸಿ ಬೆಳೆಸಬೇಕೆಂದು ಉದ್ದೇಶಿಸಿದ್ದಾರೆ. ಇವರ ಔಷಧ ಸೇವೆಯ ಅಗತ್ಯ ಇರುವವರು ಅಥವಾ ಇವರಿಗೆ ಯಾವುದೇ ಸಹಕಾರ, ಸಲಹೆಗಳನ್ನು ನೀಡಲಿಚ್ಚಿಸುವವರು ಸಂಪರ್ಕಿಸಬಹುದಾದ ವಿಳಾಸ: *ಹೆಚ್.ಸಿ. ಈಶ್ವರ ನಾಯಕ್, ನಾಟಿ ವೈದ್ಯ ಪಂಡಿತರು, ಮುಡಬ, ಕೋಣನಕೆರೆ (ಗ್ರಾಮ ಮತ್ತು ಅಂಚೆ), ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.*

ಲೇಖನ: ಮು.ಲ. ಕೆಂಪೇಗೌಡ ನಾಗಮಂಗಲ

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ವ್ಯವಸ್ಥಿತಗೊಳ್ಳುತ್ತಿರುವ ಹಿತ್ತಲಗಿಡ

ಭಂಡಾರಿ ಅಡಿಕೆ ಸುಲಿಯುವ ಯಂತ್ರದ ಉತ್ಪಾದನೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಮೊದಲ ಸ್ಪರ್ಧೆಯಲ್ಲಿ ಕೃಷಿ ಯಂತ್ರೋಪಕರಣ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದಿರುವ ನಮ್ಮ ಕೊಪ್ಪದ ನರಸಿಂಹ ಭಂಡಾರಿಯವರ ಅಡಿಕೆ ಸುಲಿಯುವ ಯಂತ್ರ ವ್ಯವಸ್ಥಿತಗೊಳ್ಳುವ ಕಾಲ ಹತ್ತಿರ ಬಂದಿದೆ. PRITVI (People Rewarding Initiatives in Technology, Values and Institutions) ಸಹಭಾಗಿತ್ವದಲ್ಲಿ ಇಬ್ಬರು ಹಿತೈಷಿಗಳಾದ ಶ್ರೀ ಕೃಷ್ಣನ್ ಅಯ್ಯರ್ ಮತ್ತು ಶ್ರೀ ರವಿಕುಮಾರ್‌ರವರು ಭಂಡಾರಿಯವರ ಅಡಿಕೆ ಸುಲಿಯುವ ಯಂತ್ರಗಳನ್ನು ವೃದ್ಧಿಪಡಿಸಲು ಮುಂದೆ ಬಂದಿದ್ದು, ಈ ಡಿಸೆಂಬರ್ ಅಂತ್ಯದಲ್ಲಿ ಮೂರು ಯಂತ್ರಗಳು ತಯಾರಾಗಲಿವೆ. ಇವುಗಳ ಕಾರ್ಯದಕ್ಷತೆಯನ್ನು ಪರೀಕ್ಷಿಸಿ, ಬೇಡಿಕೆಗೆ ಅನುಗುಣವಾಗಿ ಮತ್ತಷ್ಟು ಯಂತ್ರಗಳನ್ನು ಮುಂದೆ ತಯಾರಿಸಲು ಯೋಜಿಸಲಾಗಿದೆ.

ಇಂಗ್ಲಿಷ್ - ಕನ್ನಡ ಪರಿಸರ ನಿಘಂಟು

(ಲೇಖಕರು: ಟಿ.ಎಸ್. ವಿವೇಕಾನಂದ ಮತ್ತು ಶೇಷಗಿರಿ ಜೋಡಿದಾರ್)

ಇಂಗ್ಲಿಷ್ ಭಾಷೆಯಲ್ಲಿ ಪರಿಸರ ಸಂರಕ್ಷಣೆ ಕುರಿತು ಲಭ್ಯವಿರುವ ಶಾಸ್ತ್ರಜ್ಞಾನವನ್ನು ಕರಗತಮಾಡಿಕೊಂಡು ಕನ್ನಡೀಕರಿಸುವುದರಿಂದ ಸಾಮಾನ್ಯ ಜನತೆಗೂ ಪರಿಸರ ಮೌಲ್ಯ ಸಂರಕ್ಷಣೆ ಕುರಿತ ತಿಳಿವಳಿಕೆ ಮತ್ತು ಪ್ರಾಮುಖ್ಯತೆಯ ಅರಿವು ಮೂಡಿಸಲು ಸಾಧ್ಯವಾಗುತ್ತದೆ. ಇದಕ್ಕೆ ಪೂರ್ವಭಾವಿಯಾಗಿ ಆ ಎಲ್ಲ ಪರಿಸರಶಾಸ್ತ್ರಕ್ಕೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳ ಕನ್ನಡ ಸಂವಾದಿ ಪದಗಳ ಸಿದ್ಧತೆ ಅನಿವಾರ್ಯ. ಅಂಥದೊಂದು ಪರಿಶ್ರಮದ ಫಲವೇ 'ಪರಿಸರ ನಿಘಂಟು'.

ನಿಘಂಟು ಎಂದಕೂಡಲೇ ಸಂವಾದಿ ಅಥವಾ ಸಮಾನಾರ್ಥಕ ಪದಗಳ ಅಕಾರಾದಿ ಜೋಡಣೆಯೆಂದೇ ತಿಳಿಯಲಾಗುತ್ತದೆ. ಈ ಕೃತಿಯಲ್ಲಿ ಸಮಾನಾರ್ಥಕ ಶಬ್ದದೊಡನೆ ಶೀರ್ಷಿಕೆಯಲ್ಲೇ ತಿಳಿಸಿರುವಂತೆ ಉದ್ದಕ್ಕೂ ಆಯಾ ಪದಗಳ ಕುರಿತು ವಿವರಣೆಗಳು ಮೂಡಿದ್ದು ವಿವರಣಾತ್ಮಕ ಅರ್ಥಕೋಶವಾಗಿದೆ. ಬಹಳಷ್ಟು ಪಾರಿಭಾಷಿಕ ಶಬ್ದಗಳು ಲಿಪ್ಯಂತರವಾಗಿದ್ದು ವಿವರಣೆಯೇ ಮೇಲುಗೈಯಾಗಿದೆ. ಕೆಲವು ಶಬ್ದಗಳ ಸಂವಾದಿ ಕನ್ನಡ ಪದಗಳು ರೂಢಿಯಲ್ಲಿರುವುದಕ್ಕಿಂತ ಭಿನ್ನವಾಗಿವೆ. (Food additives, Follicle stimulating hormone, ಇತ್ಯಾದಿ). ಕೃತಿಯಲ್ಲಿ ಅಲ್ಲಲ್ಲಿ ಚಿತ್ರಗಳನ್ನು ಹೊಂದಿಸಿ ಇನ್ನಷ್ಟು ಅರ್ಥವತ್ತಾಗಿ ಮನದಟ್ಟುಮಾಡಿಕೊಡಲು ಯತ್ನಿಸಲಾಗಿದೆ.

ಒಟ್ಟಾರೆ ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ಪರಿಸರ ವಿಜ್ಞಾನ ಬೆಳವಣಿಗೆ ದೃಷ್ಟಿಯಿಂದ ಪೂರ್ವಭಾವಿಯಾಗಿ ಸಿದ್ಧವಾಗಬೇಕಿರುವ ಪಾರಿಭಾಷಿಕ ನಿಘಂಟಿನ ದೃಷ್ಟಿಯಿಂದ ಇದೊಂದು ಸಾರ್ಥಕ ಯತ್ನವಾಗಿದೆ. ಇದೊಂದು ಉಪಯುಕ್ತ ವಿವರಣಾತ್ಮಕ ಕೃತಿಯಾಗಿದ್ದು ಪರಿಸರ ವಿಜ್ಞಾನ ಹಾಗೂ ತಿಳಿವಳಿಕೆಗಳ ವಿಸ್ತರಣ ದೃಷ್ಟಿಯಿಂದ ಉತ್ತಮ ಕೃತಿಯಾಗಿದೆ. ಈ ಯತ್ನಶ್ಲಾಘನೀಯವಾಗಿದ್ದು, ಕೃತಿಯು ಇತರ ಅನೇಕ ವೈಜ್ಞಾನಿಕ ಪಾರಿಭಾಷಿಕ ಶಬ್ದಕೋಶಗಳಂತೆಯೇ ಕಾಲಾಂತರದಲ್ಲಿ ಇತರ ಬಳಕೆಯಲ್ಲಿರುವ ನಿಖರ ಸಮಾನಾರ್ಥಕ ಶಬ್ದಗಳೊಂದಿಗೆ ತಾಳೆಗೊಂಡು, ಅಂತಿಮವಾಗಿ ನಿಶ್ಚಿತ ಹಾಗೂ ನಿಖರ ಸಮಾನಾರ್ಥಕ ಶಬ್ದಗಳು ತಜ್ಞರ ಮೂಸೆಯಲ್ಲಿ ಮಿಂದು ಹೊರಬರುವುದು ಅನಿವಾರ್ಯ. ಈ ಕಾರ್ಯ ವಿಸ್ತೃತವಾಗಿದ್ದು, ಸರ್ಕಾರ ಅಥವಾ ಸಾಹಿತ್ಯ ಪರಿಷತ್ ಮುಂತಾದವುಗಳು ಉನ್ನತ ಮಟ್ಟದಲ್ಲಿ ಪರಿಶೀಲಿಸಿ ಪರಿಷ್ಕರಿಸಿ, ಹೊರತರುವುದು ಆಗಬೇಕಿರುವ ಅವಶ್ಯ ಕಾರ್ಯವಾಗಿರುತ್ತದೆ.

200 ರೂಪಾಯಿಗಳ ಮುಖಬೆಲೆಯುಳ್ಳ ಈ ಪುಸ್ತಕಕ್ಕಾಗಿ ಸಂಪರ್ಕಿಸಬಹುದಾದ ವಿಳಾಸ: ಟಿ.ಎಸ್. ವಿವೇಕಾನಂದ, ನಿರ್ದೇಶಕರು, ಇಂದ್ರಪ್ರಸ್ಥ ಪ್ರಕಾಶನ, ನಂ. 360, ಒಂದನೇ ಅಡ್ಡರಸ್ತೆ, ಗವಿಪುರ, ಸರ್ವೆಂಟ್ ಕಾಲೋನಿ, ಬೆಂ-19, ದೂ: 6720683

ವಿಮರ್ಶೆ: ಶ್ರೀಮತಿ ಸಿ.ಕೆ. ಕುಮುದಿನಿ, ಸಹಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು - 560 024

ಸಾವಯವ ಕೃಷಿಕರ ಕೈಪಿಡಿ

ದಕ್ಷಿಣ ಏಷಿಯಾ ಗ್ರಾಮೀಣ ಪುನರ್ ರಚನಾ ಸಂಸ್ಥೆ (South Asian Rural Reconstruction Association - SARRA) ಯು ಸಾವಯವ ಕೃಷಿಕರ, ಸಾವಯವ ತೋಟಗಳ ಮತ್ತು ಸಾವಯವ ಕೃಷಿಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳ ಸಮಗ್ರ ಮಾಹಿತಿಗಳನ್ನೊಳಗೊಂಡ "ಸಾವಯವ ಕೈಪಿಡಿ"ಯನ್ನು ಹೊರತರುತ್ತಿದೆ. ಇದು ಸಾವಯವ ಕೃಷಿಕರು ಹಾಗೂ ಸಂಸ್ಥೆಗಳು ಬೆಳೆಯುವ ಸಾವಯವ ಉತ್ಪನ್ನಗಳು, ಅವುಗಳು ದೊರಕುವ ಕಾಲ, ಪ್ರಮಾಣ, ಅವರ ಹಿನ್ನೆಲೆ ಮುಂತಾದ ಸಂಪೂರ್ಣ ವಿವರಗಳನ್ನೊಳಗೊಂಡಿರುತ್ತದೆ. ಈ ಕೈಪಿಡಿಯಿಂದಾಗಿ ಸಾವಯವ ಕೃಷಿಕರ ಮತ್ತು ಉತ್ಪನ್ನಗಳ ಸಮಗ್ರ ಮಾಹಿತಿ ಒಟ್ಟಿಗೇ ಸಿಗುವಂತಾಗುತ್ತದೆ. ಇದರಿಂದ ಸಾವಯವ ಕೃಷಿಯ ಆಂದೋಲನಕ್ಕೆ ತುಂಬಾ ಸಹಾಯವಾಗಲಿದೆಯಲ್ಲದೆ ನಮ್ಮ ಸಾವಯವ ಕೃಷಿಕರ ಹೆಸರು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಡುತ್ತದೆ. ಇದರ ಜೊತೆಗೆ ಈ ಸಂಸ್ಥೆಯು ಸಾವಯವ ಕೃಷಿಕರು ಅಳವಡಿಸಿಕೊಂಡಿರುವ ದೇಶೀಯ ಹಾಗೂ ಪಾರಂಪರಿಕ ಜ್ಞಾನ ಮತ್ತು ತಂತ್ರಜ್ಞಾನಗಳನ್ನು ದಾಖಲಿಸುವ ಕಾರ್ಯವನ್ನು ಮಾಡುತ್ತಿದೆ. ಈ ಜ್ಞಾನವು ಪೋಷಕಾಂಶಗಳ ನಿರ್ವಹಣೆ, ಕೀಟ ಮತ್ತು ರೋಗಗಳ ಹತೋಟಿ, ಬೀಜ ಸಂರಕ್ಷಣೆ, ಬೆಳೆ ಪದ್ಧತಿ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಪ್ರಾಣಿ ಸಾಕಾಣಿಕೆ ಮುಂತಾದ ಯಾವುದೇ ವಿಷಯದ ಮೇಲಿರಬಹುದು. ಆದ್ದರಿಂದ ತಾವು ಸಾವಯವ ಕೃಷಿಕರಾಗಿದ್ದಲ್ಲಿ ಅಥವಾ ದೇಶೀಯ ಜ್ಞಾನ ಮತ್ತು ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದ್ದಲ್ಲಿ ಅದರ ಬಗ್ಗೆ ವಿವರಗಳನ್ನು ನೀಡಲು ಸಂಸ್ಥೆಯು ಕೋರಿಕೊಂಡಿರುತ್ತದೆ. ಈ ಬಗ್ಗೆ ತಾವು ಸಂಪರ್ಕಿಸಬಹುದಾದ *ವಿಳಾಸ: ದಕ್ಷಿಣ ಏಷಿಯಾ ಗ್ರಾಮೀಣ ಪುನರ್‌ರಚನಾ (SARRA) ಸಂಸ್ಥೆ, ಲುಂಬಿಣಿ, 2ನೇ ಅಡ್ಡರಸ್ತೆ, 1ನೇ ಮುಖ್ಯ ರಸ್ತೆ, ವೀರಭದ್ರನಗರ, ಮಾರತಹಳ್ಳಿ (ಅಂಚೆ), ಬೆಂಗಳೂರು-560037, ದೂ: 080-5232227/5283824.*

ಪ್ರತಿಕ್ರಿಯೆ

ಹಿತ್ತಲಗಿಡದ ಸಂಪುಟ 8, 3ನೇ ಕೊಯಿಲಿನ ಸಂಪಾದಕೀಯ ತುಂಬಾ ಚೆನ್ನಾಗಿದೆ. ಸಾಮಾನ್ಯ ಪತ್ರಿಕೆಗಳು ತಮ್ಮ ಮೂಗಿನ ನೇರಕ್ಕೆ "ಜೀವ ವೈವಿಧ್ಯ ಸಂರಕ್ಷಣೆ" ಕಾಯಿದೆ ಬಗ್ಗೆ ಬರೆಯುತ್ತಿದ್ದವು. ಈ ಕಾಯಿದೆ ಭಾರತಕ್ಕೆ ಮತ್ತು ರೈತರಿಗೆ ಎಷ್ಟು ಅನುಕೂಲ ಎನ್ನುವುದನ್ನು ತಿಳಿಸಿದ್ದೀರಿ. ಈ ಕಾಯಿದೆಯ ಸಂಪೂರ್ಣ ಮಾಹಿತಿ ಮುಂದಿನ ಕೊಯಿಲುಗಳಲ್ಲಿ ಬರಲಿ.

ತಿಮ್ಮಣ್ಣ ಎನ್. ಹೆಗಡೆ, ಮಾಗೋಡ, ಹೊನ್ನಾವರ, ಉತ್ತರ ಕನ್ನಡ-581334

(ತಮ್ಮ ಅಭಿಪ್ರಾಯಕ್ಕೆ ಧನ್ಯವಾದಗಳು, ನೀವು ಕೋರಿರುವ ಮಾಹಿತಿ ಪೂರೈಸಲು ಮುಂದೆ ಪ್ರಯತ್ನಿಸುತ್ತೇವೆ - ಸಂ)

ಕೃಷಿ ಪತ್ರಿಕೋದ್ಯಮದಲ್ಲಿ ಡಿಪ್ಲೊಮ

ಧಾರವಾಡದ ಪರ್ಯಾಯ ಕೃಷಿಮಾಧ್ಯಮ ಕೇಂದ್ರ ಕೃಷಿಪತ್ರಿಕೋದ್ಯಮದಲ್ಲಿ ಅಂಚೆ ತೆರಪಿನ [ಕರೆಸ್ಪಾಂಡೆನ್ಸ್] ಡಿಪ್ಲೊಮ ಕೋರ್ಸ್ ಆರಂಭಿಸಲಿದೆ. ಇದೇ ಮೊದಲ ಬಾರಿಗೆ ಕನ್ನಡದಲ್ಲಿ ಇಂತಹ ತರಬೇತಿ ನಡೆಸಲಾಗುತ್ತಿದೆ.

ಒಂದು ವರ್ಷದ ಈ ಡಿಪ್ಲೊಮ ಕೋರ್ಸ್ ಬರುವ ನವೆಂಬರ್‌ನಲ್ಲಿ ಶುರುವಾಗಲಿದೆ. ಕೃಷಿಕಪರ ಕೃಷಿಪತ್ರಿಕೋದ್ಯಮದ ಮಹತ್ವ ಮತ್ತು ಸ್ವರೂಪ, ಕೃಷಿ ಬರಹದ ಪ್ರಕಾರಗಳು, ಬರವಣಿಗೆಯ ತಂತ್ರಗಾರಿಕೆ, ಛಾಯಾ ಪತ್ರಿಕೋದ್ಯಮ ಇವೇ ಮುಂತಾದ ವಿಷಯಗಳ ಕುರಿತು ತರಬೇತಿ ನೀಡಲಾಗುವುದು. ಹತ್ತು ಮಂದಿಗೆ ಮಾತ್ರ ಅವಕಾಶ.

ಆಸಕ್ತರು ಹೆಚ್ಚಿನ ವಿವರಕ್ಕಾಗಿ 10 ರೂ. ಅಂಚೆ ಚೀಟಿ ಹಚ್ಚಿದ ಸ್ವವಿಳಾಸವಿರುವ ಉದ್ದನೆಯ ಲಕೋಟೆಯೊಂದಿಗೆ ಈ ವಿಳಾಸಕ್ಕೆ ಪತ್ರ ಬರೆಯಬೇಕಾಗಿ ವಿನಂತಿಸಲಾಗಿದೆ. *ನಿರ್ದೇಶಕ, ಪರ್ಯಾಯ ಕೃಷಿಮಾಧ್ಯಮ ಕೇಂದ್ರ, ಕೃಷ್ಣಾಲಯ, 1ನೇ ಮುಖ್ಯರಸ್ತೆ, 4ನೇ ಅಡ್ಡ ರಸ್ತೆ ನಾರಾಯಣಪುರ, ಧಾರವಾಡ-580 008.*

ಚೂಡಿ ಪೂಜೆ

ಶ್ರಾವಣ ಮಾಸ ಬಂತೆಂದರೆ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಮುತ್ತೈದೆಯರಿಗೆ ಪ್ರಕೃತಿ ದೇವಿಯನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸುವ ಸಂಭ್ರಮ. ವಿಶಿಷ್ಟರೀತಿಯ ಈ ಪೂಜೆ "ಚೂಡಿ ಪೂಜೆ" ಎಂದು ಬಹಳ ಪ್ರಸಿದ್ಧ. ಶ್ರಾವಣ ಮಾಸದಲ್ಲಿ ಪ್ರಕೃತಿ ದೇವಿಯ ಮಡಿಲಲ್ಲಿ ಸಿಗುವ ನಾನಾ ಬಗೆಯ ಹೂಗಳನ್ನು ಆರಿಸಿ ಅವುಗಳನ್ನು ಒಂದು ಕ್ರಮದಲ್ಲಿ ಗುಚ್ಛವಾಗಿ ಕಟ್ಟಿ ತುಳಸೀಕಟ್ಟೆಯಲ್ಲಿ ಅವನ್ನು ಇಟ್ಟು ಪೂಜಿಸುವ ಕ್ರಮವೇ "ಚೂಡಿ ಪೂಜೆ". ಈ ಮಾಸದಲ್ಲಿ ಪ್ರತೀ ಶುಕ್ರವಾರ ಮತ್ತು ಭಾನುವಾರದಂದು ಸಮುದಾಯದ ಮುತ್ತೈದೆಯರು ತನ್ಮಯತೆಯಿಂದ ಚೂಡಿಯನ್ನು ಪೂಜಿಸುತ್ತಾರೆ.

ಚೂಡಿ ಪೂಜಿಸುವ ಹಿಂದಿನ ದಿನವೇ ಹೆಂಗಳೆಯರು ಗರಿಕೆ ಹುಲ್ಲು, ಅನ್ವಾಳಿ, ಮಿಠಾಯಿ ಹೂ, ರತ್ನಗಂಧಿ, ನೇರಳೆ ಬಣ್ಣದ ಹೂ ಮತ್ತಿತರ ವಿವಿಧ ಬಗೆಯ ಹೂಗಳನ್ನು ಸಂಗ್ರಹಿಸಿ ಅಂದವಾಗಿ ಜೋಡಿಸಿ ಒಂದು ಸುಂದರ ಗುಚ್ಛವಾಗಿ ಕಟ್ಟುತ್ತಾರೆ. ಅವರವರ ಅಗತ್ಯಾನುಸಾರ ಎಷ್ಟು ಬೇಕೋ ಅಷ್ಟು ಚೂಡಿಗಳನ್ನು ಕಟ್ಟುತ್ತಾರೆ. ಚೂಡಿ ಪೂಜೆಗಾಗಿ ಮನೆಯಂಗಳದ ತುಳಸಿ ಕಟ್ಟೆಯನ್ನು ಸಿಂಗರಿಸಲಾಗುತ್ತದೆ.

ಪೂಜಾ ಸಮಯದಲ್ಲಿ ಅವಲಕ್ಕಿ ಕಜ್ಜಾಯ, ಹೊದ್ಲುಕಜ್ಜಾಯ, ಹಣ್ಣುಕಾಯಿ, ದನದ ಹಾಲು, ಶೀರಾ ಮುಂತಾದವುಗಳಿಂದ ನೈವೇದ್ಯ ಮಾಡಲಾಗುತ್ತದೆ. ವಿಶೇಷವೆಂದರೆ ಇಲ್ಲಿ ಪುರೋಹಿತರ ಕಾರುಬಾರು ಇಲ್ಲ. ಪೂಜೆಗೆ ಮುನ್ನ ತುಳಸಿಯನ್ನು ಸಿಂಗರಿಸುವಾಗ ತುಳಸೀದೇವಿಯನ್ನು ಕುರಿತ ಭಕ್ತಿಗೀತೆಗಳನ್ನು ಭಜನೆಯನ್ನು ಹೇಳುತ್ತಾರೆ. ಅನಂತರ ತುಳಸಿಗೂ ಹರಿವಾಣದಲ್ಲಿ ಜೋಡಿಸಿಟ್ಟ ಚೂಡಿಗೂ ಆರತಿಯನ್ನು ಬೆಳಗುತ್ತಾರೆ. ನೈವೇದ್ಯವನ್ನು ದೇವರಿಗೆ ಸಮರ್ಪಿಸುತ್ತಾರೆ. ಹೀಗೆ ಚೂಡಿ ಪೂಜೆಯು ಜೀವ ವೈವಿಧ್ಯತೆ, ನಾಟಿ ಆಹಾರ ಮತ್ತು ದೇಶೀಯ ಸಂಸ್ಕೃತಿಗಳು ಮಹಿಳೆಯರ ಮೂಲಕ ಮೇಳೈಸಿರುವುದಕ್ಕೊಂದು ಸೂಕ್ತ ಉದಾಹರಣೆಯಾಗಿದೆ.

ಕೃಪೆ: ಉದಯವಾಣಿ, ಆಗಸ್ಟ್ 7, 2003

ಅವಸಾನದ ಅಂಚಿನಲ್ಲಿ ಹಿತ್ತಲಗಿಡ

ನಶಿಸುತ್ತಿರುವ ಬಿದರಿ ಕಲೆ



ಅಲಂಕಾರಿಕ ಒಂದು ಪಿಂಗಾಣಿ ಭರಣಿಯ ಮೇಲೆ ಕಪ್ಪು ಹಿನ್ನೆಲೆಯಲ್ಲಿ ಬೆಳ್ಳಿಯಂತಹ ಬಿಳಿ ಬಣ್ಣದಲ್ಲಿ ಕಲಾತ್ಮಕವಾಗಿ ಸಿಂಗರಿಸಿಕೊಂಡ 'ಬಿದರಿ ಕಲೆ' ಬೀದರಿನ ಶ್ರೀಮಂತ ಸಾಂಪ್ರದಾಯಿಕ ಕಲೆ. ಶತಮಾನಗಳ ಇತಿಹಾಸವಿರುವ ಈ ಕಲೆ ಆಧುನಿಕತೆಯ ಸುಳಿಗೆ ಸಿಕ್ಕಿ ಈಗ ಅವಸಾನದ ಅಂಚಿನಲ್ಲಿದೆ. ತೊಂಬತ್ತರ ದಶಕದ ಮೊದಲ ಭಾಗದವರೆಗೂ ಮಡಿಕೆಗಳು, ತಟ್ಟೆಗಳು, ಸಿಂಗಾರದ ಭರಣಿಗಳು, ಪಿಂಗಾಣಿ ಮುಂತಾದ ಬಿದರಿ ಕಲೆಯನ್ನೊಳಗೊಂಡ ಉಪಕರಣಗಳು ಬೆಂಗಳೂರು, ಹೈದರಾಬಾದ್, ಮುಂಬೈ, ಮುಂತಾದ ನಗರಗಳಲ್ಲಿ ಜನಪ್ರಿಯವಾಗಿ ಬೇಡಿಕೆ ಹೊಂದಿದ್ದವು. ಅಲ್ಲದೆ, ಬ್ರಿಟನ್, ಅಮೆರಿಕಾ, ಜಪಾನ್ ಮತ್ತು ಮಧ್ಯ ಪ್ರಾಚ್ಯ ದೇಶಗಳಿಗೆ ರಫ್ತಾಗುತ್ತಿದ್ದವು. ಕ್ರಮೇಣ ಹಲವು ಆಧುನಿಕ ಆವಿಷ್ಕಾರಗಳಿಂದಾಗಿ ಇತರೆ ಅಲಂಕಾರಿಕ ಸಾಮಗ್ರಿಗಳ ಪೈಪೋಟಿಗೆ ಸಿಕ್ಕಿದ್ದರಿಂದಾಗಿ ಹಾಗೂ ಅವುಗಳ ಹೆಚ್ಚು ತೂಕ ಮತ್ತು ಬೆಲೆಯಿಂದಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಕಳೆದುಕೊಂಡವು.

ಕರ್ನಾಟಕ ರಾಜ್ಯ ಗುಡಿ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯು ಈ ಕಲೆಯನ್ನು ಉಳಿಸಲು ಇದಕ್ಕೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ರಿಯಾಯಿತಿ ದರದಲ್ಲಿ ಒದಗಿಸುತ್ತಿದ್ದರೂ ಮಾರುಕಟ್ಟೆಯಲ್ಲಿ ಈ ಕಲೆಗೆ ಬೇಡಿಕೆ ಹೆಚ್ಚಿಲ್ಲ. ಹೀಗೇ ಈ ಬಿದರಿ ಕಲೆ ಕ್ಷೀಣವಾಗುತ್ತಾ ಒಮ್ಮೆ ಮಾಯವಾದರೆ ಆಶ್ಚರ್ಯಪಡಬೇಕಿಲ್ಲ. ಈಗ ಈ ಉನ್ನತ ಕಲಾಪರಂಪರೆಯನ್ನು ಉಳಿಸಲು ಕಲಾಭಿಮಾನಿಗಳು, ಕಲಾಪೋಷಕ ಸಂಘ ಸಂಸ್ಥೆಗಳು ಕೈಜೋಡಿಸಬೇಕಾದದು ತುರ್ತು ಅಗತ್ಯ.

ಕೃಪೆ: ಡೆಕ್ಕನ್ ಹೆರಾಲ್ಡ್, ಜನವರಿ 3, 2003

ಜೀವವೈವಿಧ್ಯ

ಹಾಲಕ್ಕಿ ಮಹಿಳೆಯರ ಹಸಿರು ಸಾಮ್ರಾಜ್ಯ

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನದ ಹಿಂಭಾಗದಿಂದ ಆರಂಭವಾಗಿ ಅಂಕೋಲಾ ತಾಲ್ಲೂಕಿನ ಗಂಗಾವಳಿಯವರೆಗೂ ವ್ಯಾಪಿಸಿರುವ ವಿವಿಧ ಬಗೆಯ ತರಕಾರಿ ಬೆಳೆಗಳ ಹಸಿರು ವೈಭವವೇ ಹಾಲಕ್ಕಿ ಹೆಂಗಸರು ಸೃಷ್ಟಿಸಿದ ಹಸಿರು ಸಾಮ್ರಾಜ್ಯ. ಇರುವ ಐದು-ಹತ್ತು ಗುಂಟೆ ಜಾಗದಲ್ಲಿ ಹತ್ತೆಂಟು ಬಗೆಯ ತರಕಾರಿಗಳನ್ನು ಬೆಳೆದು ಸೃಷ್ಟಿಯಾದ ಈ ಜಗತ್ತು ಜೀವವೈವಿಧ್ಯದ ಗಣಿ. ಭತ್ತದ ಗದ್ದೆ ಕೊಯ್ಲಾದ ಕೂಡಲೇ ತರಕಾರಿ ಬೀಜ ಬಿತ್ತಿ ಬೆಳೆದು ಮಾರಾಟ ಮಾಡುವ ಕಾಯಕ ಇವರಿಗೆ ಹಲವಾರು ದಶಕಗಳಿಂದ ಸಿದ್ಧಿಸಿದೆ. ತರಕಾರಿ ಬೀಜಗಳನ್ನು ಇವರೇ ಸಂಗ್ರಹಿಸಿ ಶೇಖರಿಸಿಡುತ್ತಾರೆ. ತೊಂಡೆ, ಬದನೆ, ಕುಂಬಳ, ಹಾಗಲ, ಟೊಮೆಟೋ, ಹಸಿಮೆಣಸು, ಉಳ್ಳಾಗಡ್ಡೆ, ಹೀರೇಕಾಯಿ, ನವಿಲುಕೋಸು, ಅಲಸಂದೆ, ಪಡುವಲಕಾಯಿ, ರಾಗಿ ಮುಂತಾಗಿ ಸಣ್ಣ ಜಾಗದಲ್ಲೇ ಇಷ್ಟೆಲ್ಲಾ ಬೆಳೆ. ಇವೆಲ್ಲಾ ನಾಟಿ ತಳಿಗಳೇ, ಹಾಗಾಗಿ ಇದೊಂದು ಜೀವವೈವಿಧ್ಯದ ಸೆಲೆ.

ಕೃಪೆ: ಕೃಷಿ ವಿಜಯ, ಏಪ್ರಿಲ್ 30, 2003.

ಬೇಟೆಗಳ ರಾಜ ಮುಧೋಳ ನಾಯಿ

ಬೇಟೆಗಳ ರಾಜ ಎಂದೇ ಖ್ಯಾತವಾಗಿರುವ ಮುಧೋಳ ನಾಯಿ ತಳಿ ತನ್ನದೇ ವಿಶಿಷ್ಟ ಗುಣಗಳನ್ನು ಹೊಂದಿದೆ. ಮೊನಚಾದ ಮೂತಿ, ಎತ್ತರ, ನೀಳಕಾಯ ದೇಹ ಮತ್ತು ಚುರುಕು ಬುದ್ಧಿ ಹೊಂದಿರುವ ಈ ನಾಯಿಗಳು ಕಾವಲಿಗೆ ಹೆಸರಾಗಿವೆ. ಈಗಲೂ ರೈತರು ಹೆಚ್ಚಾಗಿ ತಮ್ಮ ತೋಟಗಳ ಕಾವಲಿಗೆ ಬಳಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಪ್ರತಿ ಮುಧೋಳ ನಾಯಿ ಮರಿಯ ಬೆಲೆ ಮೂರರಿಂದ ನಾಲ್ಕು ಸಾವಿರ ರೂಪಾಯಿ ಎಂಬುದು ಇವುಗಳ ಮಹತ್ವವನ್ನು ತಿಳಿಸುತ್ತದೆ. ಮುಧೋಳ ನಾಯಿ ತಳಿಯನ್ನು ಉಳಿಸಿ ಬೆಳೆಸಲು ರೂ. 50 ಲಕ್ಷ ವೆಚ್ಚದಲ್ಲಿ ನಾಯಿ ತಳಿ ಅಭಿವೃದ್ಧಿ ಕೇಂದ್ರ, (ಫಾರಂ) ಸ್ಥಾಪಿಸುವ ಸಲುವಾಗಿ ಆರ್ಥಿಕ ನೆರವು ನೀಡಲು ರಾಜ್ಯ ಸರಕಾರ ಇತ್ತೀಚೆಗೆ ಮುಂದಾಗಿದೆ.

ಕೃಪೆ: ಕೃಷಿ ವಿಜಯ, ಜನವರಿ 20, 2003

ಪರ್ಯಾಯ ಕೃಷಿ ವಿನಿಮಯದ ಹಾದಿಯಲ್ಲಿ 'ಸಹಜ ಸಮೃದ್ಧ'

ರಾಸಾಯನಿಕ ಕೃಷಿ ಮತ್ತು ಅತಿ ಭಕ್ಷಕ ಹೈಬ್ರಿಡ್ ತಳಿಗಳಿಂದ ಬೇಸತ್ತ ರೈತರು ನಿಧಾನವಾಗಿ ರಾಸಯನಿಕದಿಂದ ಪ್ರಕೃತಿಪ್ರಿಯ ಸಾವಯವದತ್ತ ಮುಖ ಮಾಡಿದಾಗ ಅನುಭವಿಸಿದ ಕಷ್ಟಗಳು, ತಳಮಳಗಳು ಹಲವು ಬಗೆ. ಪ್ರಾರಂಭದಲ್ಲಿ ಪ್ರತಿಯೊಬ್ಬ ಸಾವಯವ ರೈತನದೂ ಒಂಟಿ ಪ್ರಯತ್ನ. ಅವರ ಪ್ರಯತ್ನಕ್ಕೆ ಯಾವುದೇ ಸಂಘ-ಸಂಸ್ಥೆಗಳಾಗಲಿ ಅಥವಾ ಸರ್ಕಾರವಾಗಲಿ ನೆರವಿಗೆ ಬಂದದ್ದು ಕಡಿಮೆ. ಆದರೆ ಅವರ ಸಂಕಲ್ಪ ಶಕ್ತಿಗೆ ಎಲ್ಲಾ ಅಡೆತಡೆಗಳನ್ನು ಮೀರಿ ಸಾಧಿಸುವ ಸಾಮರ್ಥ್ಯ ಇದ್ದುದರಿಂದ ಮಾದರಿ ಸಾಧನೆಗಳನ್ನು ಮಾಡಲು ಸಾಧ್ಯವಾಯಿತು. ಇದುವರೆಗೆ ಒಂಟಿ ನೆಲೆಗಟ್ಟಿನ ಆಂದೋಲನವಾಗಿದ್ದ ಸಾವಯವ ಕೃಷಿ ಈಗ ಸಾಂಸ್ಥಿಕ ರೂಪ ಪಡೆಯುತ್ತಾ ರೈತ ಸಮುದಾಯದತ್ತ ಒಂದು ಆಂಧೋಲನವಾಗಿ ಮುನ್ನುಗ್ಗುತ್ತಿದೆ. ಈ ನಿಟ್ಟಿನಲ್ಲಿ ಹಲವಾರು ಸಾವಯವ ಕೃಷಿಕರ ಬಳಗಗಳು ಹುಟ್ಟಿಕೊಂಡು ಸಾವಯವ ಕೃಷಿಯಲ್ಲಿ ಎದುರಾಗಿರುವ ಮತ್ತು ಮುಂದೆ ಎದುರಾಗಲಿರುವ ಸಮಸ್ಯೆಗಳಿಗೆ ಸಾಮೂಹಿಕವಾಗಿ ಪರಿಹಾರಗಳನ್ನು ಹುಡುಕುವುದರಲ್ಲಿ ತೊಡಗಿವೆ. ಇಂತಹ ಮಹತ್ವದ ಬಳಗಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ''ಸಹಜ ಸಮೃದ್ಧ'' ಸಾವಯವ ಕೃಷಿಕರ ಬಳಗವೂ ಒಂದು.

2001ರ ಮಾರ್ಚ್‌ನಲ್ಲಿ ಚನ್ನಪಟ್ಟಣದ ಸಾವಯವ ಕೃಷಿಕರ ಗುಂಪೊಂದು ತಳಿಯ ''ಗ್ರೀನ್ ಪ್ರತಿಷ್ಠಾನ''ಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ರೂಪು ತಳೆದ ಈ ಬಳಗ ಕಳೆದ ಎರಡೂವರೆ ವರ್ಷಗಳಲ್ಲಿ ತನ್ನದೇ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾ ಮುನ್ನಡೆದಿದೆ. ಪರಸ್ಪರರ ಅನುಭವ ಹಂಚಿಕೆ, ತಜ್ಞ ಕೃಷಿಕರ, ಕೃಷಿ ವಿಜ್ಞಾನಿಗಳ ಮಾರ್ಗದರ್ಶನ ಮುಂತಾದ ಉದ್ದೇಶಗಳಿಗಾಗಿ ನಿಯಮಿತವಾಗಿ ಸಭೆ-ಸಮಾರಂಭಗಳನ್ನು ಈ ಬಳಗ ನಡೆಸುತ್ತಾ, ಸಭೆಯಿಂದ ಸಭೆಗೆ ಸ್ಪಷ್ಟ ಧೋರಣೆ ಉದ್ದೇಶಗಳನ್ನು ಬೆಳಸಿಕೊಳ್ಳುತ್ತಾ, ಹಲವು ಆಸಕ್ತರನ್ನು ಆಕರ್ಷಿಸುತ್ತಾ ಹೊಸ ಪೀಳಿಗೆಯ ಯುವ ಉತ್ಸಾಹಿ ಸಾವಯವ ಕೃಷಿಕರಿಗೆ ದಾರಿ ದೀಪವಾಗಿದೆ.

ಪ್ರತಿ ಎರಡು ತಿಂಗಳಿಗೊಮ್ಮೆ ನಡೆಯುವ ಬಳಗದ ಸಭೆಗಳಲ್ಲಿ ಸಾವಯವ ಕೃಷಿಗೆ ಸಂಬಂಧಿಸಿದ ಅನುಭವ, ಜ್ಞಾನ-ತಂತ್ರಜ್ಞಾನಗಳ ಪರಸ್ಪರ ಹಂಚಿಕೆ, ಕ್ರೋಢೀಕರಣ ನಡೆಯುತ್ತಿದೆ. ಒಂದು ತೋಟದಲ್ಲಿ ನಡೆದ ಪ್ರಯೋಗಗಳು, ಪಡೆದ ಯಶಸ್ವೀ ಅನುಭವಗಳು ಬಳಗದ ಎಲ್ಲರದಾಗುತ್ತಿವೆ. ರಾಜ್ಯದಲ್ಲಿ ದೊಡ್ಡ ಪಿಡುಗಾಗಿರುವ ತೆಂಗಿನ ನುಸಿಗೆ ತಮ್ಮದೇ ಪರಿಹಾರ ಹುಡುಕಿಕೊಂಡಿದ್ದು ಬಳಗದ ಸಾಧನೆ (ದೊಡ್ಡಬಳ್ಳಾಪುರ ತಾಲ್ಲೂಕು ಶಿವಣ್ಣನವರ ತಾಮ್ರ ಚಿಕಿತ್ಸೆ, ಇತರೆ). ಜೊತೆಗೆ ಕೃಷಿ ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ. ಈ ಪ್ರವಾಸಗಳಲ್ಲಿ ರಾಜ್ಯದ ಮತ್ತು ದೇಶದ ಇತರ ಭಾಗಗಳಲ್ಲಿ ಸಾವಯವ ಕೃಷಿಯಲ್ಲಿ ತೊಡಗಿರುವ ವ್ಯಕ್ತಿಗಳ ಮತ್ತು ಸಂಘ ಸಂಸ್ಥೆಗಳೊಂದಿಗೆ ಸಂವಾದ ನಡೆಸಲಾಗುತ್ತದೆ.

ನಾಡಿನ ಹಿರಿಯ ಸಾವಯವ ಕೃಷಿಕರಾದ ಅಂತರರಾಷ್ಟ್ರೀಯ ಖ್ಯಾತಿಯ ಸೋರಹುಣಸೆ ನಾರಾಯಣ ರೆಡ್ಡಿಯವರು ಗೌರವಾಧ್ಯಕ್ಷರಾಗಿರುವ ಈ ಬಳಗ ಅವರು ಯಶಸ್ವಿಯಾಗಿ ಬೆಳೆದು ತೋರಿಸಿದ ಭತ್ತದ ಮಡಗಾಸ್ಕರ್ ಬೆಳೆ ಪದ್ಧತಿಯನ್ನು ಪ್ರಚಾರಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಈ ನಿಟ್ಟಿನಲ್ಲಿ ಬಳಗದ ವತಿಯಿಂದ ತನ್ನ ಸದಸ್ಯರ ಹೊಲ ಗದ್ದೆಗಳಲ್ಲದೆ ಮಂಡ್ಯ ಜಿಲ್ಲೆಯ ಹಲವು ಭಾಗಗಳಲ್ಲಿ ಈ 'ಮಡಗಾಸ್ಕರ್' ಭತ್ತದ ಬೆಳೆ ಪದ್ಧತಿಯ ಪ್ರಯೋಗಗಳು ನಡೆಯುತ್ತಿವೆ. ಹಲವು ಸಸ್ಯ ಮೂಲದ, ರಾಸಾಯನಿಕ ರಹಿತ ಕೀಟನಾಶಕ, ರೋಗನಾಶಕ ಮತ್ತು ಬೆಳೆ ಪ್ರಚೋದಕಗಳು ಪ್ರಚಲಿತಕ್ಕೆ ಬಂದಿವೆ. ಬೀಜ ಸಂರಕ್ಷಣೆ, ತಳಿ ಅಭಿವೃದ್ಧಿ, ರೋಗ ಮತ್ತು ಕೀಟ ನಿರ್ವಹಣೆ, ಮಳೆ ಕೊಯಿಲು, ಮಣ್ಣಿನ ಸಂರಕ್ಷಣೆ ಮುಂತಾದವುಗಳ ಬಗ್ಗೆ ಮಹತ್ವದ ಪ್ರಯೋಗಗಳು ಬಳಗದ ಸದಸ್ಯರ ಸಾವಯವ ಪ್ರಯೋಗಾಲಯಗಳಲ್ಲಿ ನಡೆಯುತ್ತಿವೆ.

ಕಳೆದ ಜೂನ್ 8ರಂದು ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ 'ನಾಳಿನ ಭವಿಷ್ಯಕ್ಕೆ ಸಾವಯವ ಕೃಷಿ' ಎಂಬ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಈ ಕಾರ್ಯಾಗಾರದಲ್ಲಿ ಕೆಲವು ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು. ಬಳಗದ ವಿವಿಧ ಉದ್ದೇಶಗಳಿಗಾಗಿ ಉಪಸಮಿತಿಗಳನ್ನು ರಚಿಸಲಾಯಿತು. ಅಲ್ಲಿ ಕೈಗೊಂಡ ನಿರ್ಣಯದಂತೆ ಕಳೆದ ಆಗಸ್ಟ್ 8ರಿಂದ 17ರ ತನಕ ನಡೆದ ಲಾಲ್‌ಬಾಗಿನ 'ಫಲಪುಷ್ಪ ಪ್ರದರ್ಶನ'ದ ವೇಳೆ ಬಳಗದ ಬಹುದಿನದ ಕನಸಾಗಿದ್ದ 'ಸಾವಯವ ಸಿರಿ' ಮಾರುಕಟ್ಟೆ ಜಾಲಕ್ಕೆ ಚಾಲನೆ ನೀಡಲಾಯಿತು. ಸಾವಯವ-ನಾಟಿ ಉತ್ಪನ್ನಗಳ ಮಾರಾಟದ ಅನುಕೂಲಕ್ಕಾಗಿ ತೋಟಗಾರಿಕೆ ಇಲಾಖೆ ಮತ್ತು 'ಸಾವಯವ ಕೃಷಿ ಉತ್ತೇಜಕ ಸಂಘ'ದ ಸಹಯೋಗದಲ್ಲಿ 'ಸಾವಯವ ಸಿರಿ' ಮಳಿಗೆ ತೆರೆಯಲಾಗಿತ್ತು. ತುಮಕೂರಿನ ಮೃತ್ಯುಂಜಯಪ್ಪನವರ ತೋಟದ ಬಾಳೆ, ಕೊಬ್ಬರಿ, ಲಿಂಗಮಾದಯ್ಯ ಮತ್ತು ರಾಮಕೃಷ್ಣಪ್ಪನವರ ತೋಟದ ಸಪೋಟ, ಹನುಮಂತರಾಜು ಬೆಳೆದ ಪಡುವಲ ಕಾಯಿ, ವಿಜಯ್‌ಕುಮಾರ್ ಬೆಳೆದ ಅಕ್ಕಿ, ರಾಗಿ, ಚಂದ್ರಗಿರಿಯವರ ಸಹಜ ತೋಟದ ತೆಂಗಿನ ಕಾಯಿ, ಜೈಮಿನಿ ಬಳಗದ ಸಸ್ಯ ಮೂಲ ಕೀಟನಾಶಕ, ಗೋವಿಂದ ಕಬಾಡಿಯವರ ತೋಟದ ಸೀಬೆ, ಎರೆಗೊಬ್ಬರ, ಸುಳ್ಯದ ಶಾಂತಿಮೂಲೆಯವರ ಸಾಂಬಾರ ಪದಾರ್ಥಗಳು, ಸುಧೀಂದ್ರರ ಔಷಧಿಯ ಸಸ್ಯಗಳು, ಚಾಮರಾಜನಗರದ ಮಂಜುನಾಥರ ಅರಿಷಿಣ, ಮೈಸೂರಿನ ಸಹಜ ಕೃಷಿಕ ಚಂದ್ರಶೇಖರ್ ತೋಟದ ವೈವಿಧ್ಯಮಯ ಕೃಷಿ ಉತ್ಪನ್ನಗಳು ಮಳಿಗೆಯಲ್ಲಿ ಮಾರಾಟಕ್ಕಿದ್ದವು. ಈ ಸಂಧರ್ಭದಲ್ಲಿ ಬೆಂಗಳೂರಿನ ನೂರಾರು ಗ್ರಾಹಕರು ಹೆಚ್ಚು ಬೆಲೆ ಕೊಟ್ಟಾದರೂ ಕೊಳ್ಳಲು ಸಿದ್ಧರಾದುದು ಸ್ವಾಗತಾರ್ಹ ಮತ್ತು ಪ್ರೋತ್ಸಾಹದಾಯಕ ಬೆಳವಣಿಗೆ. ಅಡಿಕೆ ಪತ್ರಿಕೆ, ಗ್ರೀನ್ ಪ್ರತಿಷ್ಠಾನ, ಗ್ರಾಮ ವಿಕಾಸ, ಇಕ್ರಾ ಮೊದಲಾದ ಸಾವಯವ ಕೃಷಿಯಲ್ಲಿ ತೊಡಗಿರುವ ಸಂಸ್ಥೆಗಳು 'ಸಾವಯವ ಸಿರಿ'ಯ ಜೊತೆಗೂಡಿ ಹಲವಾರು ಉತ್ಪನ್ನಗಳನ್ನು ಪ್ರದರ್ಶನಕ್ಕಿಟ್ಟಿದ್ದವು. ಈ ಸಂದರ್ಭದಲ್ಲಿ ಸಾವಯವ ಸಿರಿ ಮಳಿಗೆಗೆ ಭೇಟಿ ನೀಡಿದ್ದ ರಾಜ್ಯದ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಟಿ.ಎನ್. ಚತುರ್ವೇದಿಯವರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದ್ದು ಹೆಮ್ಮೆಯ ಸಂಗತಿ. ಇದರ ಮುಂದುವರೆದ ಭಾಗವಾಗಿ ರಾಜ್ಯದ ವಿವಿಧ ಸಾವಯವ ಕೃಷಿಕರ ಬಳಗಗಳ ಜೊತೆಗೂಡಿ 'ಸಾವಯವ ಸಿರಿ' ಮಾರುಕಟ್ಟೆ ಜಾಲವನ್ನು ವಿಸ್ತರಿಸುವ ಮತ್ತು ರಾಜ್ಯದ ವಿವಿಧ ನಗರಗಳಲ್ಲಿ ಶಾಶ್ವತ 'ಸಾವಯವ ಉತ್ಪನ್ನ ಮಳಿಗೆ'ಗಳನ್ನು ತೆರೆಯುವ ದೊಡ್ಡ ಗುರಿಯನ್ನು ಬಳಗ ಹೊಂದಿದೆ.

ತನ್ನೆಲ್ಲಾ ಚಟುವಟಿಕೆಗಳ ಮಾಹಿತಿಗಳನ್ನೊಳಗೊಂಡ ಸುದ್ದಿ ಪತ್ರವೊಂದನ್ನು ಬಳಗ ಹೊರತರುತ್ತಿದೆ. ಸಾವಯವ ಕೃಷಿಯ ಉಪಯುಕ್ತ ಜ್ಞಾನಾನುಭವಗಳನ್ನು ಹೊತ್ತು ತರುತ್ತಿರುವ ಈ ಹೊತ್ತಿಗೆ ಸಧ್ಯಕ್ಕೆ ಉಚಿತವಾಗಿ ಲಭ್ಯ.

''ಸಹಜ ಸಮೃದ್ಧ''ದ ಯಶಸ್ಸಿಗೆ ಸಾಕ್ಷಿಯಾಗಿ ಬಳಗದ ಸದಸ್ಯರು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದಾರೆ. ತಂಡದ ಹಿರಿಯ ಸದಸ್ಯ ಲಿಂಗಮಾದಯ್ಯನವರ 'ಮೈಸೂರು ಮಲ್ಲಿಗೆ' ತಳಿಗೆ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಪ್ರಥಮ ಪ್ರಶಸ್ತಿ ಬಂದಿದ್ದರೆ, ಬಳಗದ ಸಂಚಾಲಕ ಶ್ರೀ ಕೃಷ್ಣಪ್ರಸಾದ್ ಮತ್ತು ಮತ್ತೊಬ್ಬ ಸಕ್ರಿಯ ಸದಸ್ಯೆ ಅನಸೂಯಶರ್ಮಾರಿಗೆ 'ಸೃಷ್ಟಿ ಸನ್ಮಾನ' ದೊರೆತಿದೆ. ಬಳಗದ ಹಲವು ಸದಸ್ಯರು ಆಕಾಶವಾಣಿಯ ಬಾನುಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಬಳಗದ ಕುರಿತು ಹಾಗೂ ಬಳಗದ ಸದಸ್ಯರ ಕುರಿತು ನಾಡಿನ ವಿವಿಧ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಗುರುತಿಸಲ್ಪಟ್ಟಿದ್ದಾರೆ. ವಿಳಾಸ: *ಜಿ. ಕೃಷ್ಣಪ್ರಸಾದ್, 'ಶ್ರೀ', ನಂ.2, 4ನೇ ಅಡ್ಡ ರಸ್ತೆ, ಎನ್. ಜಿ. ಆರ್. ಲೇಔಟ್, ರೂಪೇನ ಅಗ್ರಹಾರ, ಬೆಂಗಳೂರು-68.*

ಲೇಖನ: ಮು.ಲ. ಕೆಂಪೇಗೌಡ ನಾಗಮಂಗಲ

ಕರ್ನಾಟಕ ಅನುಶೋಧಕರ ಜಾಲ (KIN)

(Karnataka Innovator's Network)

೨೦೦೧ರ ಡಿಸೆಂಬರ್ ಅಂತ್ಯದಲ್ಲಿ ದೆಹಲಿಯಲ್ಲಿ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಪ್ರಥಮ ಸ್ಪರ್ಧೆಯ ವಿಜೇತರನ್ನು ಸನ್ಮಾನಿಸುವ ಸಮಾರಂಭದಲ್ಲಿ ತೆಗೆದುಕೊಂಡ ಒಂದು ಮಹತ್ವದ ನಿರ್ಣಯದ ಅನ್ವಯ "ಕರ್ನಾಟಕ ಅನುಶೋಧಕರ ಜಾಲ"ವನ್ನು ಹುಟ್ಟುಹಾಕಲಾಗಿರುತ್ತದೆ. ಕರ್ನಾಟಕ ರಾಜ್ಯದ ಸಾವಯವ ರೈತರ ಪ್ರಯೋಗಗಳ, ಕೃಷಿಕರ, ಬುಡಕಟ್ಟು ಜನಾಂಗಗಳ, ಕರಕುಶಲಕರ್ಮಿಗಳ, ಗ್ರಾಮೀಣ ಮಹಿಳೆಯರು ಮತ್ತು ಕಸುಬುದಾರರ, ಮತ್ತಿತರರ ತಳಮಟ್ಟದ ಹಾಗೂ ಪಟ್ಟಣ ಪ್ರದೇಶದಲ್ಲಿ ಯಾವ ಸಂಸ್ಥೆಗಳ ಸಹಾಯವಿಲ್ಲದೇ ನಡೆಸುತ್ತಿರುವ ಅನುಶೋಧನೆಗಳನ್ನು ಪ್ರೋತ್ಸಾಹಿಸಲು ಅವುಗಳನ್ನು ವ್ಯವಸ್ಥಿತಗೊಳಿಸಿ ಆ ಮೂಲಕ ವಾಣಿಜ್ಯೀಕರಣಗೊಳಿಸಲು ನೆರವಾಗುವುದೇ ಈ ಜಾಲದ ಮುಖ್ಯ ಉದ್ದೇಶವಾಗಿರುತ್ತದೆ. ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಸಂಪೂರ್ಣ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಈ ಜಾಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ನಿಟ್ಟಿನಲ್ಲಿ ನೀತಿ, ನಿಯಮ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಸಲಹೆ ಮತ್ತು ಸಹಕಾರ ನೀಡುವ ಕಾರ್ಯವನ್ನು ನಿರ್ವಹಿಸಲಿದೆ. ತಳಮಟ್ಟದ ಜನರ ಅನುಶೋಧನೆ ಮತ್ತು ಸಾವಯವ ಕೃಷಿಕರ ಪ್ರಯೋಗಗಳನ್ನು ಗಟ್ಟಿಮಾಡುವ ಘನ ಕಾರ್ಯದಲ್ಲಿ ನಿರತರಾಗಿರುವ ಎಲ್ಲಾ ವ್ಯಕ್ತಿ, ಸಂಘ, ಸಂಸ್ಥೆ ಮತ್ತು ಸಮೂಹಗಳಿಗೆ ಕೊಂಡಿಯಾಗುತ್ತಾ 'ಕರ್ನಾಟಕ ಅನುಶೋಧಕರ ಜಾಲ (ಕಿನ್-KIN)'ವು ಸುಸ್ಥಿರ ಅಭಿವೃದ್ಧಿಗೊಂದು ಹೊಸ ಆಯಾಮ ನೀಡಲು ಶಕ್ತಿಮೀರಿ ಪ್ರಯತ್ನ ನಡೆಸಲಿದೆ.

ವಿ.ಸೂ.: ಈ ಜಾಲದ ಸದಸ್ಯರಾಗಬಯಸುವವರು ಕನಿಷ್ಟ ೧೦೦ ರೂಪಾಯಿಗಳ ಸದಸ್ಯತ್ವ ಶುಲ್ಕ ನೀಡತಕ್ಕದ್ದು. ಈ ನಿಟ್ಟಿನಲ್ಲಿ ತಮ್ಮ ವಿಳಾಸ, ಅನುಶೋಧನೆಗಳ ಪೂರ್ಣ ವಿವರದೊಂದಿಗೆ ನೋಂದಾಯಿಸಿಕೊಳ್ಳಬಹುದು ಮತ್ತು ಈ ಮೇಲಿನ ತತ್ವವನ್ನು ಗಟ್ಟಿಮಾಡಬಯಸುವ ಇತರರಿಗೂ 'ಕಿನ್' ನಲ್ಲಿ ಸ್ವಾಗತವಿದೆ. ಹೆಚ್ಚಿನ ವಿವರಗಳಿಗೆ ಜಾಲದ ಸಂಚಾಲಕರೂ ಆದ ಹಿತ್ತಲಗಿಡ ಸಂಪಾದಕರನ್ನು ಸಂಪರ್ಕಿಸಿ.

ತುಮಕೂರಿನಲ್ಲೊಂದು ಕಾರ್ಯಾಗಾರ

ತುಮಕೂರಿನ ಶ್ರೀ ಸಿದ್ಧಾರ್ಥ ತಾಂತ್ರಿಕ ಸಂಸ್ಥೆಯ ಆಶ್ರಯದಲ್ಲಿ ಮತ್ತು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಪ್ರಾಯೋಜಕತ್ವದಲ್ಲಿ ಬರುವ ಸೆಪ್ಟೆಂಬರ್ 22 ಮತ್ತು 23 ರಂದು ಎರಡು ದಿನಗಳ ಕಾಲ "**ತಳಮಟ್ಟದ ಅನುಶೋಧನೆಗಳನ್ನು ಪೋಷಿಸಿ, ಪ್ರೋತ್ಸಾಹಿಸುವ ಕಾರ್ಯಾಗಾರ**"ವನ್ನು ಏರ್ಪಡಿಸಲಾಗಿದೆ. ಈ ಸಂಧರ್ಭದಲ್ಲಿ ಮುಖ್ಯವಾಗಿ ಉತ್ತಮ ಯಾಂತ್ರಿಕ ಅನುಶೋಧನೆಗಳ ವಸ್ತುಪ್ರದರ್ಶನ ಹಾಗೂ ಈ ಅನುಶೋಧನೆಗಳ ಅಭಿವೃದ್ಧಿ, ಬಳಕೆ, ಮೌಲ್ಯ ವರ್ಧೀಕರಣ, ಬೌದ್ಧಿಕ ಹಕ್ಕುಗಳು ಕುರಿತಾದ ಹಲವು ವಿಚಾರ ಗೋಷ್ಟಿಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಾಗಾರದಲ್ಲಿ ಹಿಂದಿನ ಸ್ಪರ್ಧೆಗಳ ಪ್ರಶಸ್ತಿ ವಿಜೇತರೂ ಸೇರಿದಂತೆ ಕರ್ನಾಟಕದ ಸುಮಾರು 30 ತಳಮಟ್ಟದ ಅನುಶೋಧಕರು ಹಿತ್ತಲಗಿಡ ಬಳಗದ ವತಿಯಿಂದ ಪಾಲ್ಗೊಳ್ಳಲಿದ್ದಾರೆ. ತಳಮಟ್ಟದ ಅನುಶೋಧಕರನ್ನು ಪ್ರೋತ್ಸಾಹಿಸುವ ಮುಖ್ಯ ಉದ್ದೇಶದ ಈ ಕಾರ್ಯಾಗಾರದಲ್ಲಿ ಕರ್ನಾಟಕ ರಾಜ್ಯದ ವಿದ್ಯಾಮಂತ್ರಿಗಳಾದ ಡಾ. ಪರಮೇಶ್ವರ್ ಮತ್ತು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮುಖ್ಯಸ್ಥರಾದ ಶ್ರೀ ಪ್ರೊ. ಅನಿಲ್ ಗುಪ್ತ ಸೇರಿದಂತೆ ವಿವಿಧ ತಾಂತ್ರಿಕ ತಜ್ಞರು, ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಲಿದ್ದಾರೆ.

ಶೋಧಯಾತ್ರೆ

'ಹಿತ್ತಲಗಿಡ' ಈಗಾಗಲೇ ಪ್ರಕಟಿಸಿರುವಂತೆ ಸ್ಥಳೀಯ ಪಾರಂಪರಿಕ ಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳನ್ನು ದಾಖಲಿಸುವ ಹನ್ನೆರಡನೆ 'ಶೋಧ ಯಾತ್ರೆ'ಯನ್ನು ಬರುವ 2003ರ ಡಿಸೆಂಬರ್ ಕೊನೆಯ ವಾರದಲ್ಲಿ ಕರ್ನಾಟಕದಲ್ಲಿ ಏರ್ಪಡಿಸಲಾಗಿದೆ. ಸ್ಥಳೀಯ ಪಾರಂಪರಿಕ ಜ್ಞಾನದ ಸಂರಕ್ಷಕರು ಮತ್ತು ಅನುಶೋಧಕರನ್ನು ಗುರುತಿಸಿ ಅವರೊಂದಿಗೆ ಚರ್ಚಿಸಿ, ಅವುಗಳನ್ನು ದಾಖಲಿಸಿಕೊಳ್ಳುತ್ತಾ ಸುಮಾರು ನೂರು ಕಿಲೋಮೀಟರ್ ದೂರವನ್ನು ಕಾಲುನಡಿಗೆಯಲ್ಲಿ ಕ್ರಮಿಸುವ ಈ ಪಾದಯಾತ್ರೆಯನ್ನು ನಮ್ಮ ಮಲೆನಾಡಿನ ನಿತ್ಯ ಹರಿದ್ವರ್ಣ ಕಾಡುಗಳ ಮಧ್ಯೆ ಹಮ್ಮಿಕೊಳ್ಳಲಾಗಿದೆ. ಈ ವಿನೂತನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಚ್ಛಿಸುವವರು ಹಿತ್ತಲಗಿಡವನ್ನು ಸಂಪರ್ಕಿಸತಕ್ಕದ್ದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ "ಸಂಪಾದಕರು, ಹಿತ್ತಲಗಿಡ, ಬೆಂಗಳೂರು" ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

ಗೆ, ...
....
....
....

Ph: 080-3620025 (O)
email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navabharath Enterprises" No.10, Sirur Park `B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi